# ಭಾರತೀಯ ಕಮ್ಯುನಿಸ್ಟರಲ್ಲಿನ ಮೂರು ಸಮಕಾಲೀನ ಧಾರೆಗಳು

ದಿಪಂಕರ್ ಭಟ್ಟಾಚಾರ್ಯ

ಪ್ರಕಟಣೆ
ಇದ್ಲಿ ರಾಮಪ್ಪ
ರಾಜ್ಯ ಕಾರ್ಯದರ್ಶಿ, ಸಿ.ಪಿ.ಐ.ಎಂ.ಎಲ್. ಲಿಬರೇಷನ್,
ಕರ್ನಾಟಕ ರಾಜ್ಯ ಸಮಿತಿ,
ಸುಣ್ಣದ ಕೇರಿ, ಹರಪನ ಹಳ್ಳಿ, ದಾವಣಗೆರೆ ಜಿಲ್ಲೆ.

ನೇಪಾಳದಲ್ಲಿ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಕುತೂಹಲಕಾರಿ ಬೆಳವಣಿಗೆಗಳು ಭಾರತೀಯ ಕಮ್ಯುನಿಸ್ಟ್ ಚಳುವಳಿಯಲ್ಲೂ ಪಕ್ಷಗಳ ಕಾರ್ಯಕ್ರಮ ಮತ್ತು ತಂತ್ರಗಾರಿಕೆಗಳ ವಿಷಯದಲ್ಲಿ ಚಿಂತನ ಮಂಥನಗಳಿಗೆ ಎಡೆ ಮಾಡಿಕೊಟ್ಟಿದೆ. ಗಮನಾರ್ಹ ಸಂಗತಿ ಎಂದರೆ ತನ್ನ ಇಲ್ಲಿಯವರೆಗಿನ ಅಭಿಪ್ರಾಯಕ್ಕೆ ತದ್ವಿರುದ್ಧವಾಗಿ ಸಿ.ಪಿ.ಎಂ. ಪಕ್ಷವು ನೇಪಾಳಿ ಮಾವೋವಾದಿಗಳನ್ನು ಹೊಗಳುವುದರಲ್ಲಿ ತೊಡಗಿದೆ (EPW dt. 22-7-06). ಆದರೆ ನೇಪಾಳದ ಮಾವೋವಾದಿಗಳ ಬೆಂಬಲಿಗರಾದ ಭಾರತೀಯ ಮಾವೋವಾದಿಗಳು ತಮ್ಮ ನೆರೆರಾಷ್ಟ್ರದ ಸಂಗಾತಿಗಳ ಹಲವು ಹೆಜ್ಜೆಗಳು ಮತ್ತು ನಿರ್ಧಾರಗಳ ಬಗ್ಗೆ ಅಸಮಧಾನ ವ್ಯಕ್ತಪಡಿಸುತ್ತಿದ್ದಾರೆ. (People march Jun-Jul 2006 & EPW Oct 14, 2006)

**ಯಚೂರಿ (1) ಮತ್ತು ಸೈದ್ಧಾಂತಿಕ ಧಾರೆಗಳ ವ್ಯಾಖ್ಯಾನ**

ಕೇಂದ್ರದಲ್ಲಿ ಅಧಿಕಾರದಲ್ಲಿರುವ ಯು.ಪಿ.ಎ. ಸರ್ಕಾರವು ನೇಪಾಳದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕರಣ್‌ಸಿಂಗ್‌ರವರ ರಾಯಭಾರಿತ್ವ ವಿಫಲವಾದ ನಂತರ, ಸರ್ಕಾರದ ವಕ್ತಾರರ ರೂಪದಲ್ಲಿ ಯಚೂರಿಯವರನ್ನು ನೇಪಾಳಕ್ಕೆ ಕಳುಹಿಸಿತ್ತು. ಅವರು, ನೇಪಾಳದಲ್ಲಿ ಮಾವೋವಾದಿಗಳು ಕೈಗೊಂಡಿರುವ ಪ್ರಾಯೋಗಿಕ ಹೆಜ್ಜೆ ಭಾರತದಲ್ಲಿನ ತಮ್ಮ ಸಿ.ಪಿ.ಎಂ. ಪಕ್ಷದ ನೀತಿಯನ್ನು ಸಮರ್ಥಿಸುವುದೆಂದೂ, ಈ ಹಿನ್ನೆಲೆಯಲ್ಲಿ ಇಡೀ ನಕ್ಸಲ್‌ಬಾರಿ ಮತ್ತು ಸಿ.ಪಿ.ಐ.ಎಂ.ಎಲ್. ಚಳುವಳಿಯ ಇತಿಹಾಸವನ್ನು ಅಪ್ರಸ್ತುತವೆಂದು ತಳ್ಳಿಹಾಕಬಹುದೆಂದೂ ಪ್ರತಿಪಾದಿಸಿದ್ದಾರೆ. ಅನುಭವ ಮತ್ತು ವಿಶ್ಲೇಷಣೆಗಳಿಂದ ಪಾಠ ಕಲಿಯುವ ಪ್ರಕ್ರಿಯೆಯ ನೆಪದಲ್ಲಿ ಯಚೂರಿಯವರು, ಭಾರತೀಯ ಕಮ್ಯುನಿಸ್ಟ್ ಚಳುವಳಿಯಲ್ಲಿನ ಸೈದ್ಧಾಂತಿಕ-ರಾಜಕೀಯ ಸಂಘರ್ಷವನ್ನೇ ವಿಕೃತಗೊಳಿಸಲು ಹೊರಟಿದ್ದಾರೆ. ಭಾರತೀಯ ಕಮ್ಯುನಿಸ್ಟ್ ಚಳುವಳಿಯು, ಪರಿಷ್ಕರಣವಾದ (2), ಮಾರ್ಕ್ಸ್‌ವಾದ ಮತ್ತು ಎಡಪಂಥೀಯ ಸಾಹಸವಾದಗಳನ್ನು ಧೃವೀಕರಿಸುವ ಪ್ರಯತ್ನ ಮಾಡಿತೆಂದು ಹೇಳುವ ಮೂಲಕ, ಕ್ರಮವಾಗಿ ಸಿ.ಪಿ.ಐ., ಸಿ.ಪಿ.ಎಂ. ಮತ್ತು ಸಿ.ಪಿ.ಎಂ.ಎಲ್. ಗುಂಪುಗಳಲ್ಲಿ ಈ ಪ್ರವೃತ್ತಿಗಳನ್ನು ಗುರುತಿಸಲು ಪ್ರಯತ್ನಿಸುತ್ತಾರೆ.

ಇಲ್ಲಿ ಒಂದು ಮುಖ್ಯವಾದ ಪ್ರಶ್ನೆ ಉದ್ಭವಿಸುತ್ತದೆ. ಯಚೂರಿಯವರ ಅಭಿಪ್ರಾಯದಂತೆ ಸಿ.ಪಿ.ಐ. ಪಕ್ಷವು ಪರಿಷ್ಕತಣವಾದದ ಚಿಲುಮೆಯಾಗಿದ್ದು, ಸಿ.ಪಿ.ಐ.ಎಂ. ಪಕ್ಷವು ಮಾರ್ಕ್ಸ್‌ವಾದದ ನಿಜವಾದ ರಕ್ಷಕರಾಗಿದ್ದಲ್ಲಿ, ಈ ಎರಡೂ ಪಕ್ಷಗಳೂ ಒಂದಾಗುವ ಕಾಲ ಸನ್ನಿಹಿತವಾಗಿದೆ ಎಂಬ ಕೂಗು ಪದೇ ಪದೇ ಏಕೆ ಕೇಳಿಬರುತ್ತಿದೆ? ಮಾರ್ಕ್ಸ್‌ವಾದವನ್ನು ಸಮರ್ಥಿಸಲು ಮತ್ತು ಬೆಳೆಸಲು, ಸುಧಾರಣಾವಾದದ ವಿರುದ್ಧ, ಪರಿಷ್ಕರಣವಾದದ ವಿರುದ್ಧ, ಎಡ ಪಂಥೀಯ

ಪ್ರತ್ಯೇಕತಾವಾದದ ವಿರುದ್ಧ, ಸಾಹಸವಾದದ ವಿರುದ್ಧ, ಅರಾಜಕತೆಯ ವಿರುದ್ಧ ನಿರಂತರವಾಗಿ ಹೋರಾಡುವುದು ಅತ್ಯಗತ್ಯ ಎಂಬ ಸತ್ಯ ಎಲ್ಲಾ ಮಾರ್ಕ್ಸ್‌ವಾದಿಗಳಿಗೂ ತಿಳಿದಿರಲೇಬೇಕು. ಸಿ.ಪಿ.ಎಂ. ಪಕ್ಷವು ನಕ್ಸಲೀಯರು ಮತ್ತು ಮಾವೋವಾದಿಗಳೊಡನೆ ಸೈದ್ಧಾಂತಿಕ ಭಿನ್ನಾಭಿಪ್ರಾಯ ಹೊಂದಿರುವ ಅಂಶ ಎಲ್ಲರಿಗೂ ತಿಳಿದೇ ಇದೆ. ಆದರೆ ಸಿ.ಪಿ.ಐ. ನೊಡನೆ ಯಾವ ರೀತಿಯ ಭಿನ್ನಾಭಿಪ್ರಾಯವಿದೆ? ಕಾಂಗ್ರೆಸ್ ಪಕ್ಷದೊಡನೆ ಮೈತ್ರಿ ಸಾಧಿಸುವಲ್ಲಿ ಎರಡೂ ಪಕ್ಷಗಳು ಏಕಾಭಿಪ್ರಾಯ ತಳೆದರೂ, ಸಿ.ಪಿ.ಎಂ. ಲಲ್ಲೂ ಯಾದವ್ ಅವರನ್ನು ಬೆಂಬಲಿಸಿದರೆ ಸಿ.ಪಿ.ಐ.ರಾಮ್ ವಿಲಾಸ್ ಪಾಸ್ವಾನ್ ರವರನ್ನು ಬೆಂಬಲಿಸುತ್ತದೆ. (3) ಇದನ್ನು ಹೊರತುಪಡಿಸಿದರೆ ಬೇರಾವ ವಿಷಯದಲ್ಲಿ ಎರಡೂ ಪಕ್ಷಗಳ ನಡುವೆ ಭಿನ್ನಾಭಿಪ್ರಾಯವಿದೆ? ಸಿ. ಪಿ.ಐನ ಪರಿಷ್ಕರಣವಾದ ಎಲ್ಲಿ ಮರೆಯಾಯಿತು ಯಚೂರಿಯವರೇ?

ಭಾರತೀಯ ಬೂರ್ಷ್ವಾಗಳನ್ನು ದಲ್ಲಾಳಿ (4)(Cimprador) ಬಂಡವಾಳಿಗರೆಂದು ವ್ಯಾಖ್ಯಾನಿಸಿರುವ ಸಿ.ಪಿ.ಐ.ಎಂ.ಎಲ್. ಪಕ್ಷವು ಬೂರ್ಷ್ವಾಗಳನ್ನು ಯಾವುದೇ ಸುಭದ್ರ ಸಾಮಾಜಿಕ ತಳಹದಿಯಿಲ್ಲದ ಶಕ್ತಿಯನ್ನಾಗಿ ಪರಿಗಣಿಸುತ್ತದೆ ಎಂದು ಯಚೂರಿ ಪ್ರತಿಪಾದಿಸುತ್ತಾರೆ. ಅದೇ ರೀತಿ ಜಮೀನ್ದಾರರನ್ನೂ ಬಲಹೀನರೆಂದು ಪರಿಗಣಿಸುವ ಸಿ.ಸಿ.ಐ.ಎಂ. ಎಲ್. ಚಲುವಳಿಯು ಕೆಲವೇ ಜಮೀನ್ದಾರರ ಹತ್ಯೆಗೆಯ್ಯುವ ಮೂಲಕ ಇಡೀ ಭೂಮಾಲೀಕತ್ವವನ್ನೇ ತೊಡೆದು ಹಾಕಬಹುದೆಂದು ಭಾವಿಸುತ್ತದೆ, ಎಂದೂ ಯಚೂರಿ ವಾದಿಸುತ್ತಾರೆ. ಆದರೆ ನಮ್ಮ ಪ್ರಕಾರ 1969 ರಿಂದ 1972ರವರೆಗಿನ ಅವಧಿಯಲ್ಲಿ ದೇಶದ ಕ್ರಾಂತಿಕಾರಿ ಸಿ.ಪಿ.ಐ.ಎಂ.ಎಲ್. ಚಳುವಳಿಯು ತನ್ನ ಪ್ರಾಥಮಿಕ ಹಂತದಲ್ಲಿ ಕೆಲವು ಸಂದರ್ಭಗಳಲ್ಲಿ ನೇರ ಕಾರ್ಯಾಚರಣೆಗಾಗಿ ಕರೆ ನೀಡಿದ್ದೂ ಉಂಟು ಪ್ರಚಲಿತವಾಗಿದ್ದ ಅನೇಕ ಹೋರಾಟದ ಸ್ವರೂಪಗಳನ್ನು, ಕಾರ್ಯಕ್ರಮಗಳನ್ನು ತಿರಸ್ಕರಿಸಿದ್ದೂ ಉಂಟು. ವಾಸ್ತವವಾಗಿ ಒಂದು ಸ್ಥಾಪಿತ ವ್ಯವಸ್ಥೆಯನ್ನು ಮತ್ತು ಆಳುವ ವರ್ಗವನ್ನು ಬೇಧಿಸಲಾಗದ ಸುಭದ್ರ ಕೋಟೆಗಳೆಂದು ಭಾವಿಸಿ ಯಾವುದೇ ಕ್ರಾಂತಿಯನ್ನು ರೂಪಿಸಲಾಗುವುದಿಲ್ಲ.ತನ್ನ ಪ್ರಾರಂಭಿಕ ತತ್‌ಕ್ಷಣದ ಧ್ಯೇಯವನ್ನು ಸಾಧಿಸುವಲ್ಲಿ ನಕ್ಸಲ್‌ಬಾರಿ ಚಳುವಳಿ ಸಫಲವಾಗಲಿಲ್ಲವೆಂಬ ಅಂಶವನ್ನು ತಿರಸ್ಕರಿಸಲಾಗುವುದಿಲ್ಲವಾದರೂ, ಒಂದು ಹೊಸ ಕ್ರಾಂತಿಕಾರಿ ಹಾದಿಯನ್ನು ರೂಪಿಸುವಲ್ಲಿ ಯಶಸ್ವಿಯಾಗಿದ್ದನ್ನು ಒಪ್ಪಲೇಬೇಕಾಗುತ್ತದೆ. ಈ ಹಾದಿಯೇ ಮುಂದಿನ ಹಲವಾರು ಕ್ರಾಂತಿಕಾರಿ ಬೆಳವಣಿಗೆಗೆ ನಾಂದಿಯಾದದ್ದನ್ನು ಅಲ್ಲಗಳೆಯಲಾಗುವುದಿಲ್ಲ. ನಕ್ಸಲ್ ಬಾರಿ ದಂಗೆ ಮತ್ತು ಸಿ.ಪಿ.ಐ. ಎಂ.ಎಲ್ ಚಳುವಳಿಯು ಹೊರಹೊಮ್ಮಿಸಿದ ಕ್ರಾಂತಿಕಾರಿ ಚಳುವಳಿಯ ಹಾದಿಯನ್ನು ಲೇವಡಿ ಮಾಡುವ ಮೂಲಕ ಯಚೂರಿಯವರು, ಅರವತ್ತರ ದಶಕದಲ್ಲಿ ಕಂಡು ಬಂದ ಅನೇಕ ರೈತ ಕಾರ್ಮಿಕ ಚಳುವಳಿಗಳಿಗೆ ತಮ್ಮ ಪಕ್ಷ ಕಾಂಗ್ರೆಸ್‌ನ

ಒಂದು ಬಣದೊಡನೆ ಹೊಂದಾಣಿಕೆ ಮಾಡಿಕೊಂಡು 1967ರಲ್ಲಿ ಪಶ್ಚಿಮ ಬಂಗಾಳದಲ್ಲಿ ರಚಿಸಿದ ಸರ್ಕಾರವೇ ಇವುಗಳಿಗೆ ಪ್ರತ್ಯಕ್ಷ ಪರೋಕ್ಷ ಕಾರಣವೆಂದು ಪ್ರತಿಪಾದಿಸಲೆತ್ನಿಸುತ್ತಾರೆ. ಇಲ್ಲಿ ಯರ್ಚೂರಿಯವರು ಗ್ರಹಿಸಬೇಕಾದ ಅಂಶವೆಂದರೆ, 60ರ ದಶಕದ ಈ ರೈತ ಕಾರ್ಮಿಕ ಚಳುವಳಿಗಳೇ, 67ರ ಸರ್ಕಾರದ ರಚನೆಗೆ ಕಾರಣವಾಗಿದ್ದವು. ದುರದೃಷ್ಟವಶಾತ್ ಈ ಸಮ್ಮಿಶ್ರ ಸರ್ಕಾರವು ಕೇಂದ್ರದ ಆಳುವ ವರ್ಗಗಳಿಗೆ ತಮ್ಮ ಸ್ವಾಮಿ ನಿಷ್ಠೆಯನ್ನು ತೋರಲು ನಕ್ಸಲ್‌ಬಾರಿ ದಂಗೆಯನ್ನು ಹತ್ತಿಕ್ಕಿ ರಕ್ತದ ಮಡುವಿನಲ್ಲಿ ಮುಳುಗಿಸಿತ್ತು ಆದರೆ ಬಂಗಾಲದ ಸಂಯುಕ್ತ ರಂಗ ಸರ್ಕಾರ ನಕ್ಸಲೀಯರ ವಿರುದ್ಧ ನಡೆಸಿದ ದೌರ್ಜನ್ಯ ಮತ್ತು ದಬ್ಬಾಳಿಕೆಗಳು ಸಿಪಿಎಂ ಪಕ್ಷವನ್ನೂ ಕಾಡದೆ ಬಿಡಲಿಲ್ಲ. ಕೊನೆಗೆ ನಕ್ಸಲ್ ವಿರೋಧಿ ಫ್ಯಾಸಿಸ್ಟ್ ಆಕ್ರಮಣವು ಕ್ರಮೇಣವಾಗಿ ಎಡ ಪಂಥೀಯ ವಿರೋಧಿ ಕಾರ್ಯಾಚರಣೆಯಾಗಿ, ತುರ್ತು ಪರಿಸ್ಥಿತಿಯ ವೇಳೆಗೆ ವಿರೋಧ ಪಕ್ಷಗಳ ದಮನಕ್ಕೆ ಸಾಂದಿ ಹಾಡಿತ್ತು.

**ಭಾರೀ ಉದ್ಯಮಿಗಳೊಡನೆ ವ್ಯವಹಾರ**

ದಲ್ಲಾಳಿ ಬಂಡವಾಳಿಗರು (4) ಎಂಬ ಪದವನ್ನು ಸಿ.ಪಿ.ಎಂ. ಪಕ್ಷವು ಎಷ್ಟೇ ನಗಣ್ಯವಾಗಿ ಇತಿಹಾಸದ ಪಳೆಯುಳಿಕೆ ಎಂದು ಪರಿಗಣಿಸಿದರೂ, ಈ ಪದವು ಬಳಕೆಯಲ್ಲಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಚೀನಾದಲ್ಲಿ ಮಾವೋರವರು ಈ ಪದವನ್ನು ಸಾಮ್ರಾಜ್ಯಶಾಹಿಗಳೊಡನೆ ಸಂಬಂಧ ಹೊಂದಿದ್ದ ಬೂರ್ಷ್ವಾಗಳನ್ನು ಗುರುತಿಸಲು ಉಪಯೋಗಿಸುತ್ತಿದ್ದುದನ್ನು ಇಲ್ಲಿ ಸ್ಮರಿಸಬಹುದು. ಹಾಗಾಗಿ ದಲ್ಲಾಳಿ ಬಂಡವಾಳಿಗರೆಂದರೆ ಸಾಮ್ರಾಜ್ಯಶಾಹಿ ಪರವೆಂದೂ, ದಲ್ಲಾಳಿಗಳಲ್ಲದವರು ಸಾಮ್ರಾಜ್ಯಶಾಹಿ ವಿರೋಧಿಗಳೆಂದೂ ಮಾವೋರವರು ಪರಿಗಣಿಸುತ್ತಿದ್ದರು. ಹಾಗಾಗಿ ಈ ದಲ್ಲಾಳಿಗಳಲ್ಲಿಂದ ದೇಶೀ ಬಂಡವಾಳಿಗರುಗಳನ್ನು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ಮತ್ತು ಭೂಮಾಲೀಕರ ವಿರುದ್ಧದ ಹೋರಾಟದಲ್ಲಿ ಸಂಗಾತಿಗಳಂತೆ ಪರಿಗಣಿಸುವಂತೆ ಮಾವೋ ಕರೆ ನೀಡಿದ್ದರು. ಭಾರತದಲ್ಲಿಯೂ ಸಹ ಎಂ.ಎಲ್. ಚಳುವಳಿಗಳು ಮತ್ತು ಅನೇಕ ರಾಜಕೀಯ, ಆರ್ಥಿಕ ವ್ಯಾಖ್ಯಾನಕಾರರು, ಭಾರತದ ಆಳುವ ವರ್ಗಗಳ ಸಾಮ್ರಾಜ್ಯಶಾಹಿ ಪರ ಆರ್ಥಿಕ ನೀತಿಗಳನ್ನು ವಿಶ್ಲೇಷಿಸುವಾಗ, ಮತ್ತು ಭಾರತೀಯ ಬಂಡವಾಳಗಾರರ-ಭಾರೀ ಉದ್ಯಮಿಗಳ ಜಾಗತಿಕ ಬಂಡವಾಳದೊಳಗಿನ ಸಮೀಕರಣ ಪ್ರಕ್ರಿಯೆಯನ್ನು ವಿಶ್ಲೇಷಿಸುವಾಗ ಈ ಪದವನ್ನು ಬಳಸುವುದು ವಾಡಿಕೆಯಾಗಿದೆಯೇ ಹೊರತು, ದೇಶೀ ಬಂಡವಾಳಗಾರರಿಗೆ ಉತ್ಪಾದನಾ ಸಾಮರ್ಥ್ಯವಿಲ್ಲ ಎಂಬ ಅರ್ಥದಲ್ಲಿ ಈ ಪದವನ್ನು ಬಳಸಿಲ್ಲ.

ಭಾರತೀಯ ಪ್ರಭುತ್ವವನ್ನು ಬೂರ್ಷ್ವಾಗಳೇ ನಡೆಸುತ್ತಿರುವ ಸತ್ಯಾಂಶವನ್ನು ಸಿ.ಪಿ.ಎಂ. ಮಾತ್ರ ಗ್ರಹಿಸಿರುವುದರಿಂದ, ತಮ್ಮ ಪಕ್ಷದ ಕಾರ್ಯಕ್ರಮಗಳು ಮತ್ತು

ನೀತಿಗಳು ವಾಸ್ತವತೆಗೆ ಹತ್ತಿರವಾಗಿವೆ ಎಂದು ಯರ್ಚೂರಿ ಪ್ರತಿಪಾದಿಸುತ್ತಾರೆ. ಆದರೆ ಭಾರತೀಯ ಪ್ರಭುತ್ವವನ್ನು ಬೂರ್ಷ್ವಾಗಳು ತನ್ನ ನಿಯಂತ್ರಣದಲ್ಲಿರಿಸಿಕೊಂಡಿರುವ ಅಂಶ ಸಿ.ಪಿ.ಎಂ. ಪಕ್ಷದ ಅನ್ವೇಷಣೆಯೇನೂ ಅಲ್ಲ. ಭಾರತೀಯ ಪ್ರಭುತ್ವದಲ್ಲಿ ಭೂಮಾಲೀಕರ ಹಿಡಿತ ಹೆಚ್ಚಾಗಿದೆ ಎಂದಾಗಲೀ ಸಾಮ್ರಾಜ್ಯಶಾಹಿಯು ದೇಶದ ಆಳುವ ವರ್ಗಗಳ ಮೇಲೆ ನೇರವಾದ ಹಿಡಿತ ಸಾಧಿಸಿದೆ ಎಂದಾಗಲೀ ಯಾರೂ ವ್ಯಾಖ್ಯಾನಿಸುತ್ತಿಲ್ಲ. ದೇಶದ ಆಳ್ವಿಕೆಯಲ್ಲಿ ಸಾಮ್ರಾಜ್ಯಶಾಹಿಗಳ ಮಧ್ಯಸ್ಥಿಕೆ ಹೆಚ್ಚಾಗುತ್ತಿದ್ದರೂ, ಭಾರತವನ್ನು ಆಫ್ಘಾನಿಸ್ತಾನದೊಡನೆಯಾಗಲೀ, ಇರಾಕ್‌ನೊಡನೆಯಾಗಲೀ, ಅಥವಾ ಬನಾನಾ ರಿಪಬ್ಲಿಕ್ (5) ದೇಶಗಳೊಡನೆಯಾಗಲೀ ಅಥವಾ ಇನ್ನಾವುದೇ ಅಮೇರಿಕಾದ ಸೂತ್ರದಲ್ಲಿ ಸಿಲುಕಿರುವ ದೇಶಗಳೊಡನೆಯಾಗಲಿ ಹೋಲಿಸಲಾಗುವುದಿಲ್ಲ. ಆದರೂ ಭಾರತೀಯ ಆಳುವ ವರ್ಗಗಳ ಮೇಲೆ ಬೂರ್ಷ್ವಾಗಳ ಹಿಡಿತವನ್ನು ಒಪ್ಪಿಕೊಳ್ಳುತ್ತಲೇ, ಈ ಬೂರ್ಷ್ವಾಗಳ ಲಕ್ಷಣಗಳನ್ನು ಅರ್ಥೈಸುವಲ್ಲಿ ಭಿನ್ನಾಭಿಪ್ರಾಯಗಳು ಇದ್ದೇ ಇವೆ.

ಸಿ.ಪಿ.ಎಂ. ಪಕ್ಷವು ಭಾರತೀಯ ಬೂರ್ಷ್ವಾಗಳ ಲಕ್ಷಣವನ್ನು ಇಬ್ಬಂದಿ ಲಕ್ಷಣವೆಂದು ಅರ್ಥೈಸುತ್ತದೆ. ಅಂದರೆ ಒಂದೆಡೆ ಸಾಮ್ರಾಜ್ಯಶಾಹಿಗಳೊಡನೆ ಸೆಣಸಾಡುತ್ತಲೇ, ಅವರೊಡನೆಯೇ ಹೊಂದಾಣಿಕೆ ಮಾಡಿಕೊಳ್ಳುವ ಲಕ್ಷಣವನ್ನು ಸಿ.ಪಿ.ಎಂ. ಬೂರ್ಷ್ವಾಗಳಲ್ಲಿ ಗುರುತಿಸುತ್ತದೆ. ಈ ನಿಟ್ಟಿನಲ್ಲಿ ಮಾರ್ಕ್ಸ್‌ವಾದದ ನಿಜವಾದ ಪ್ರತಿಪಾದಕರೆಂದು ಬೀಗುವ ಸಿ.ಪಿ.ಎಂ. ಪಕ್ಷವು, ಬೂರ್ಷ್ವಾಗಳ ಈ ಇಬ್ಬಂದಿ ಲಕ್ಷಣಗಳಲ್ಲಿ ಸಂಘರ್ಷ ಅಥವಾ ಸಹಭಾಗಿತ್ವ ಯಾವುದು ಪ್ರಧಾನ, ಯಾವುದು ಹೆಚ್ಚು ಪ್ರಬಲವೆಂದು ಇಲ್ಲಿಯವರೆಗೂ ಉತ್ತರಿಸಿಲ್ಲ. ಜಾಗತೀಕರಣದ ಯುಗದಲ್ಲಿ ಈ ನಿಟ್ಟಿನಲ್ಲೇ ಸಂಘರ್ಷ ಹೆಚ್ಚಾಗುತ್ತದೆ ಎಂದು ಸಿ.ಪಿ.ಎಂ. ಪಕ್ಷದ ಹೊಸ ಕಾರ್ಯಕ್ರಮದಲ್ಲಿ ಹೇಳಲಾಗಿದೆ. ಆದರೆ ಇದು ವಾಸ್ತವತೆಯಿಂದ ದೂರವಾಗಿದೆ ಎಂದು ಗ್ರಹಿಸಲು ಯಾರಿಗೂ ಸಿ.ಪಿ.ಎಂ.ಎಲ್. ಪಕ್ಷದ ಸದಸ್ಯರಾಗಿರಬೇಕಿಲ್ಲ. ಸಾಮಾನ್ಯವಾದ ರಾಜಕೀಯ ವಿಶ್ಲೇಷಕರೂ ಈ ಅಂಶವನ್ನು ಗ್ರಹಿಸಬಲ್ಲರು. ಕಾಂಗ್ರೆಸ್ ಮತ್ತು ಭಾ ಜ ಪದ ಆರ್ಥಿಕ ವಿದೇಶಿ ನೀತಿಗಳು ಅಮೆರಿಕಾ ಪರವಾದ ನಿಲುವನ್ನು ಸ್ಪಷ್ಟವಾಗಿ ಪ್ರಕಟಪಡಿಸುತ್ತಿದ್ದರೂ, ಭಾ ಜ ಪ ವನ್ನು ಅಧಿಕಾರದಿಂದ ಹೊರಗಿಡುವ ನೆಪದಲ್ಲಿ ಸಿ.ಪಿ.ಎಂ. ಪಕ್ಷವು ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರವನ್ನು ಬೆಂಬಲಿಸುವುದರ ಮೂಲಕ, ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷದೊಡನೆ ಅಧಿಕಾರ ಹಂಚಿಕೊಳ್ಳುವ ಅವಕಾಶಕ್ಕಾಗಿ ಕಾಯುತ್ತಿದೆ. (ಪ್ರಕಾಶ್ ಕಾರಟ್ ಇಂಡಿಯನ್ ಎಕ್ಸ್‌ಪ್ರೆಸ್ 29/10/2006 ಸಂಭಾಷಣೆ)

**ಊಳಿಗಮಾನ್ಯ ಶಕ್ತಿಯ ಮೌಲ್ಯಮಾಪನದಲ್ಲಿ ವಿಫಲತೆ**

ಸಾಮ್ರಾಜ್ಯಶಾಹಿಯನ್ನು ಹೊರತುಪಡಿಸಿ ಭಾರತದ ಪ್ರಜಾತಾಂತ್ರಿಕ ಕ್ರಾಂತಿಯಲ್ಲಿ ಪ್ರಮುಖ ಪ್ರಶ್ನೆಯಾದ ಊಳಿಗಮಾನ್ಯ ಪದ್ಧತಿಯ ಪಳೆಯುಳಿಕೆಗಳ ಬಗ್ಗೆ ಸಿ.ಪಿ.ಎಂ.

ಪಕ್ಷದ ಕಾರ್ಯಕ್ರಮ ಬಹಳ ಜಾಳೆನಿಸುತ್ತದೆ. ಈ ವಿಷಯದಲ್ಲೂ ಸಿ.ಪಿ.ಎಂ. ತನ್ನ ಇಬ್ಬಂದಿತನವನ್ನು ಪ್ರದರ್ಶಿಸುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಆರು ದಶಕಗಳಾಗಿದ್ದರೂ, ಭಾರತೀಯ ಸಮಾಜದಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಪಳೆಯುಳಿಕೆಗಳು ಇನ್ನೂ ತನ್ನ ಪ್ರಾಬಲ್ಯವನ್ನು ಉಳಿಸಿಕೊಂಡಿರುವುದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ಇಂದಿಗೂ ತನ್ನ ದಬ್ಬಾಳಿಕೆಯನ್ನು, ಶೋಷಣಾ ವ್ಯವಸ್ಥೆಯನ್ನು ಮುಂದುವರೆಸಿಕೊಂಡು, ತಮ್ಮ ಖಾಸಗೀ ಸೈನ್ಯಗಳ ಮೂಲಕ, ದಲಿತರ ವಿರುದ್ಧ, ಗ್ರಾಮೀಣ ಬಡ ಜನತೆಯ ವಿರುದ್ಧ ಸಶಸ್ತ್ರ ಯುದ್ಧ ಸಾರುತ್ತಿರುವ ಈ ವ್ಯವಸ್ಥೆ ಕೇವಲ ಬಿಹಾರದ ಕೆಲವು ಹಿಂದುಳಿದ ಗ್ರಾಮಗಳಲ್ಲಿ ಮಾತ್ರ ಪ್ರಚಲಿತವಾಗಿದೆಯೆಂದು ಹೇಳಲಾಗುವುದಿಲ್ಲ. ದಲಿತರ ಮೇಲಿನ ದಬ್ಬಾಳಿಕೆ, ಆದಿವಾಸಿ ಮತ್ತು ಮಹಿಳೆಯರ ಶೋಷಣೆ, ಲೇವಾದೇವಿ ವ್ಯವಹಾರ, ಜೀತದಾಳಿನ ಪದ್ಧತಿ ಮುಂತಾದ ಊಳಿಗಮಾನ್ಯ ವ್ಯವಸ್ಥೆಯ ಲಕ್ಷಣಗಳನ್ನು ಪಂಜಾಬ್, ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶದಂತಹ ಮುಂದುವರೆದ ರಾಜ್ಯಗಳಲ್ಲೂ ಇಂದಿಗೂ ಪ್ರಚಲಿತವಾಗಿರುವುದನ್ನು ಕಾಣಬಹುದು. ಆದಾಗ್ಯೂ ಸಿ.ಪಿ.ಎಂ. ಪಕ್ಷದ ಕಾರ್ಯಕ್ರಮದಲ್ಲಿ ಈ ವ್ಯವಸ್ಥೆಯ ಪಳೆಯುಳಿಕೆಗಳನ್ನು ತೊಡೆದು ಹಾಕುವ ಯಾವುದೇ ಉಲ್ಲೇಖ ಕಂಡುಬರುವುದಿಲ್ಲ. ಹಾಗಾಗಿಯೇ ದೇಶಾದ್ಯಂತ ಬೆಳೆಯುತ್ತಿರುವ ಭೂಮಾಲೀಕ ವಿರೋಧಿ ಚಳುವಳಿಗಳಿಗೆ, ಜಮೀನ್ದಾರರ ದಬ್ಬಾಳಿಕೆಗಳಿಗೆ, ಭೂ ಮಾಲೀಕರ ಶೋಷಣೆಗಳಿಗೆ ಸಿ.ಪಿ.ಎಂ. ಗಮನ ಹರಿಸದೆ ತನ್ನ ಬೆನ್ನು ತಿರುಗಿಸಿದೆ. ಇದಕ್ಕೆ ತದ್ವಿರುದ್ಧವಾಗಿ ಸಿ.ಪಿ.ಐ.ಎಂ.ಎಲ್. ಪಕ್ಷವು ಊಳಿಗಮಾನ್ಯ ಪದ್ಧತಿಯ ನಿರ್ಮೂಲನೆಗಾಗಿ, ಭಾರತೀಯ ಪ್ರಜಾತಾಂತ್ರಿಕ ಕ್ರಾಂತಿಯ ಮುಖ್ಯ ಅಂಶವಾದ ಭೂಮಾಲೀಕ ವಿರೋಧೀ ಚಳುವಳಿಯನ್ನು ತನ್ನ ಮುಖ್ಯಕಾರ್ಯಕ್ರಮವನ್ನಾಗಿ ಪರಿಗಣಿಸಿದ್ದು, ದೇಶದ ಅನೇಕ ಗ್ರಾಮಗಳಲ್ಲಿ ಒಂದು ಸುಭದ್ರ ನೆಲೆ ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಭಾರತದ ರಾಜಕಾರಣದಲ್ಲಿನ ಬಹು ಪಕ್ಷೀಯ ಪ್ರಜಾತಂತ್ರದಲ್ಲಿ ತಮ್ಮ ಪಕ್ಷ ಕಂಡುಕೊಂಡಿರುವ ಯಶಸ್ವಿ ಪ್ರಯೋಗ ಮತ್ತು ಅನುಭವವನ್ನೇ ಸಿ.ಪಿ.ಎಂ. ತನ್ನ ಹಾದಿಯ ಸಮರ್ಥನೆಗೆ ಉಪಯೋಗಿಸಿಕೊಳ್ಳುತ್ತಿದೆ. ಮೂರು ದಶಕಗಳಿಂದ ಪಶ್ಚಿಮ ಬಂಗಾಲದಲ್ಲಿ, ಕೇರಳ ಮತ್ತು ತ್ರಿಪುರಾಗಳಲ್ಲಿ ಅಧಿಕಾರದ ರುಚಿ ಕಂಡಿರುವ ಸಿ.ಪಿ.ಎಂ., ಈಗ ಕೇಂದ್ರ ಮತ್ತು ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ ಮತ್ತಿತರ ಪ್ರಾದೇಶಿಕ ಬೂರ್ಷ್ವಾ ಪಕ್ಷಗಳೊಡನೆ ಒಡಂಬಡಿಕೆ ಮಾಡಿಕೊಳ್ಳುವುದರ ಮೂಲಕ, ರಾಜಕೀಯದಲ್ಲಿ ಒಂದು ರೀತಿಯ ಅನುಭವವನ್ನು ಗಳಿಸಿದೆ. ಒಂದು ಆಳುವ ಪಕ್ಷವಾಗಿ ಅಥವಾ ಆಳುವ ಪಕ್ಷದ ಮಿತ್ರ ಪಕ್ಷವಾಗಿ ಸಿ.ಪಿ.ಎಂ. ಗೆ ಈಗ ಕೇಂದ್ರ ಸರ್ಕಾರ ರೂಪಿಸುವ ಆರ್ಥಿಕ ನೀತಿಗಳನ್ನು ಅನುಷ್ಠಾನಗೊಳಿಸುವುದೇ ಮುಖ್ಯ ಕಾರ್ಯಕ್ರಮವಾಗಿದೆ. ಈ ತನ್ನ ಹೊಸ ಅವತಾರದಲ್ಲಿ

ಸಿ.ಪಿ.ಎಂ. ಪಕ್ಷವು, ಮಾನವೀಯ ಮುಖವಾಡದೊಂದಿಗೆ ಒಂದು ಕಾಲದಲ್ಲಿ ತಾನೇ ವಿರೋಧಿಸುತ್ತಿದ್ದ ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳನ್ನು, ತಮ್ಮ ಪಕ್ಷವನ್ನು ಬೆಂಬಲಿಸಿದ ಜನಸಾಮಾನ್ಯರ ಮೇಲೆ ಹೇರುತ್ತಿದೆ.

1967ರ ನಕ್ಸಲ್ ಬಾರಿಯಿಂದ 2006ರ ಸಿಂಗೂರಿನವರೆಗೆ, ಸಿ.ಪಿ.ಎಂ. ಎಲ್ಲೇ ಅಧಿಕಾರದಲ್ಲಿದ್ದರೂ, ಪ್ರಜೆಗಳು ಮತ್ತು ಪ್ರಭುತ್ವದ ನಡುವೆ ಒಂದನ್ನು ಆಯ್ದುಕೊಳ್ಳುವ ಸಂದಿಗ್ಧತೆಯನ್ನು ಎದುರಿಸಿದೆ. ಪ್ರತಿಯೊಂದು ಸಂದರ್ಭದಲ್ಲೂ ಪಕ್ಷವು ಪ್ರಜೆಗಳ ವಿರುದ್ಧ, ಪ್ರಭುತ್ವದ ಪರ ವಹಿಸಿರುವುದು ಸ್ಪಷ್ಟವಾಗಿ ಕಾಣಬಹುದು. ಯೆಚೂರಿಯವರು ಭೂಮಾಲೀಕರ ವಿರುದ್ಧ ಹೋರಾಡುವ ರೈತಾಪಿ ಜನರಲ್ಲಿ, ಸಶಸ್ತ್ರ ಹೋರಾಟದ ಮೂಲಕ ರಾಜಕೀಯ ಅಧಿಕಾರ ಪಡೆಯುವ ಭ್ರಮಾಲೋಕವನ್ನು ಸೃಷ್ಟಿಸಿರುವುದಾಗಿ, ನಕ್ಸಲ್ ಬಾರಿ ಚಳುವಳಿಯನ್ನು ದೂಷಿಸುತ್ತಾರೆ. ಆದರೆ ಸಿಂಗೂರಿನ ರೈತರು, ಕೃಷಿಕಾರ್ಮಿಕರು, ಮತ್ತು ಗೇಣಿದಾರರ ಬಗ್ಗೆ ಯೆಚೂರಿಯವರು ಏನು ಹೇಳುತ್ತಾರೆ? ಈ ಹೋರಾಟ ನಿರತ ಜನ ತಮ್ಮ ಭೂಮಿಯನ್ನು ಮತ್ತು ಬಾಳುವ ಹಕ್ಕನ್ನು ರಕ್ಷಿಸಿಕೊಳ್ಳಲು ಹೋರಾಡುತ್ತಿದ್ದಾರೆ, ಆದರೆ ಸಿ.ಪಿ.ಎಂ. ನೇತೃತ್ವದ ರಾಜ್ಯ ಸರ್ಕಾರವು ವಸಾಹತುಶಾಹಿಗಳ ಕಾಲದ ಭೂ ಸಂಗ್ರಹಣಾ ಕಾನೂನಿನ ಆಶ್ರಯದಲ್ಲಿ ಅವರಿಂದ ಕೃಷಿಯೋಗ್ಯ ಫಲವತ್ತಾದ ಭೂಮಿಯನ್ನು ಕಸಿದುಕೊಂಡು, ಟಾಟಾಗಳಿಗೆ ಕಾರುಗಳನ್ನು ತಯಾರಿಸುವ ಕಾರ್ಖಾನೆಗಾಗಿ ಬಳುವಳಿಯಾಗಿ ನೀಡುತ್ತಿದೆ. ಭಾರತೀಯ ಬೂರ್ಷ್ವಾಗಳನ್ನು ಸಿ.ಪಿ.ಎಂ. ಅರ್ಥ ಮಾಡಿಕೊಂಡಿರುವ ರೀತಿ ಮತ್ತು ಪಕ್ಷದ ಸಾಮಾಜಿಕ ತಳಹದಿಗಳು, ಸಿ.ಪಿ.ಎಂ. ಪಕ್ಷವನ್ನು ಕಾಂಗ್ರೆಸ್‌ನೊಡನೆ ಅಧಿಕಾರ ಹಂಚಿಕೊಳ್ಳುವಂತೆ ಪ್ರೇರೇಪಿಸುತ್ತಿದೆ. ತನ್ನ ಈ ಹೊಸ ಹಾದಿಯಲ್ಲಿ ಸಿ.ಪಿ.ಎಂ. ಪಕ್ಷವು ಟಾಟಾಗಳನ್ನು, ಅಂಬಾನಿಗಳನ್ನು, ಏಷ್ಯಾ ಅಭಿವೃದ್ಧಿ ಬ್ಯಾಂಕುಗಳನ್ನು ಸಂತುಷ್ಟಿಗೊಳಿಸುತ್ತಿದೆ.

### ನೇಪಾಳದ ಪ್ರಜಾತಾಂತ್ರಿಕ ಮುಖ್ಯವಾಹಿನಿಯ ಪುನರ್ ವ್ಯಾಖ್ಯಾನ

"ಭಾರತೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ನಡೆಯುತ್ತಿರುವ ವಾದ ವಿವಾದಗಳು, ಭಿನ್ನಾಭಿಪ್ರಾಯಗಳು ನೇಪಾಳದ ಕಮ್ಯುನಿಸ್ಟ್ ಚಳುವಳಿಯ ಮೇಲೂ ನೇರವಾದ ಪರಿಣಾಮ ಬೀರುತ್ತಿತ್ತು ಇನ್ನು ಮುಂದೆಯೂ ಬೀರುತ್ತದೆ" ಎಂದು ಯೆಚೂರಿಯವರು ಪ್ರತಿಪಾದಿಸುತ್ತಾರೆ. ಪ್ರಸ್ತುತ ನೇಪಾಳದಲ್ಲಿ ಎರಡು ರೀತಿಯ ಕಮ್ಯುನಿಸ್ಟ್ ಪ್ರವೃತ್ತಿಯನ್ನು ಕಾಣಬಹುದಾಗಿದೆ. ಸಿ.ಪಿ.ಎನ್. (ಮಾವೋವಾದಿ) ಮತ್ತು ಸಿ.ಪಿ.ಎನ್ (ಸಂಯೋಜಿತ ಮಾರ್ಕ್ಸ್‌ವಾದಿ-ಲೆನಿನ್ ವಾದಿ) ಪಕ್ಷಗಳು ಈ ಪಥಗಳನ್ನು ಪ್ರತಿನಿಧಿಸುತ್ತವೆ. ೧೯೯೦ರಲ್ಲಿ ನೇಪಾಳದಲ್ಲಿ ನಡೆದ ಪ್ರಜಾಪ್ರಭುತ್ವ ಉಳಿಸಿ ಹೋರಾಟದಲ್ಲಿ ಸಿ.ಪಿ.ಎನ್. (ಸಂ.ಮಾ.ಲೆ) ನೇಪಾಳೀ ಕಾಂಗ್ರೆಸ್‌ನ ಪ್ರತಿಸ್ಪರ್ಧಿಯಾಗಿ ಹೊರಹೊಮ್ಮಿದರೆ, ೨೦೦೬ರ ರಾಜ ಪ್ರಭುತ್ವ ವಿರೋಧಿ ಚಳುವಳಿಯು ಸಿ.ಪಿ.ಎನ್. (ಎಂ) ಪಕ್ಷವನ್ನು ರಾಜಕೀಯ ರಂಗದ

ಮುಂಚೂಣಿಯಲ್ಲಿ ತಂದು ನಿಲ್ಲಿಸಿದೆ. ಈ ಬೆಳವಣಿಗೆಗಳನ್ನು ಯಚೂರಿಯವರು ಭಾರತೀಯ ಕಮ್ಯುನಿಸ್ಟ್ ಚಳುವಳಿಯಲ್ಲಿನ ಚರ್ಚೆಗಳ ಮತ್ತು ಪ್ರವೃತ್ತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲು ಯತ್ನಿಸುತ್ತಾರೆ. ನೇಪಾಳದ ಎರಡೂ ಕಮ್ಯುನಿಸ್ಟ್ ಪಕ್ಷಗಳು ಭಾರತದಲ್ಲಿ ನಡೆದ ನಕ್ಸಲ್ ಬಾರಿ ಚಳುವಳಿ ಮತ್ತು ಸಿ.ಪಿ.ಐ.ಎಂ.ಎಲ್. ಚಳುವಳಿಯಿಂದ ಪ್ರೇರೇಪಿತವಾಗಿ ಹುಟ್ಟಿಕೊಂಡ ಚಳುವಳಿಗಳು. ಕ್ರಮೇಣವಾಗಿ ನೇಪಾಳದಲ್ಲಿ ಚಾರಿತ್ರಿಕವಾಗಿ ಸಿ.ಪಿ.ಐ. ಮತ್ತು ಸಿ.ಪಿ.ಎಂ. ನೊಡನೆ ಗುರುತಿಸಿಕೊಂಡಿದ್ದ ಕಮ್ಯುನಿಸ್ಟ್ ಚಳುವಳಿಗಳು ಈ ಎರಡೂ ಪಕ್ಷಗಳಿಂದ ದೂರವಾಗಿದ್ದನ್ನೂ, ತದನಂತರ ಈಗಿರುವ ಎರಡು ಕಮ್ಯುನಿಸ್ಟ್ ಪ್ರವೃತ್ತಿಗಳೊಡನೆ ಗುರುತಿಸಿಕೊಂಡಿರುವುದನ್ನೂ ನಾವು ಕಾಣಬಹುದು.

ಇಲ್ಲಿ ಗಮನಿಸಬೇಕಾದ ಸತ್ಯಾಂಶವೆಂದರೆ, ಸಿ.ಪಿ.ಎನ್. (ಸಂ.ಮಾ.ಲೆ.)ಯಾಗಲೀ, ಸಿ.ಪಿ.ಎನ್ (ಎಂ) ಆಗಲೀ, ತಾವು ಬೆಳಕಿಗೆ ಬರುವ ಮುನ್ನ ಸಿ.ಪಿ.ಎಂ ಪಕ್ಷದೊಡನೆ ಅಷ್ಟಾಗಿ ಒಡನಾಟ ಹೊಂದಿರಲಿಲ್ಲ. ನೇಪಾಳದ ರಾಜಕಾರಣದಲ್ಲಿ ಈ ಪಕ್ಷಗಳಿಗೆ ಮಹತ್ವದ ಪಾತ್ರ ವಹಿಸುವ ಸನ್ನಿವೇಶ ಎದುರಾದಾಗ ಸಿ.ಪಿ.ಎಂ ನೊಡನೆ ತಮ್ಮ ಸಂಬಂಧಗಳನ್ನು ಉತ್ತಮಗೊಳಿಸಿಕೊಳ್ಳುವುದು ಈ ಪಕ್ಷಗಳಿಗೆ ಅನಿವಾರ್ಯವಾಗಿತ್ತು. ಈ ಒಡನಾಟದ ಹಿಂದಿನ ರಾಜತಾಂತ್ರಿಕ ಉದ್ದೇಶಗಳನ್ನು ಗ್ರಹಿಸುವುದು ಕಷ್ಟದ ಮಾತೇನಲ್ಲ. ಸಿ.ಪಿ.ಎನ್ (ಎಂ) ಪಕ್ಷವು ಇಂದು ಈ ಒಂದು ಪ್ರಾತಿನಿಧ್ಯ, ಪ್ರಾಬಲ್ಯ ಗಳಿಸಿದ್ದರೆ, ಅದು ಪಕ್ಷವು ಹತ್ತು ವರ್ಷಗಳ ಕಾಲ ನಡೆಸಿದ ಪ್ರಜಾ ಚಳುವಳಿಗಳ ಪ್ರತಿಫಲವೆಂದೇ ಹೇಳಬೇಕು. ಹಾಗಾಗಿ ಈ ಪಕ್ಷದ ಇತಿಹಾಸವನ್ನು ಅಲ್ಲಗಳೆದು, ನಿರ್ಲಕ್ಷಿಸಿ ಅದರ ಪ್ರಸ್ತುತ ಪ್ರಾಬಲ್ಯವನ್ನು ಮಾತ್ರ ಹೊಗಳುವುದು ರಾಜಕೀಯ ಅವಕಾಶವಾದದ ಪರಮಾವಧಿ ಮತ್ತು ತಾತ್ವಿಕ ದೀವಾಳಿತನದ ಕುರುಹಾಗುತ್ತದೆ.

ನೇಪಾಳದ ಸಿ.ಪಿ.ಎನ್ (ಎಂ) ಪಕ್ಷವು ಪ್ರಜಾತಾಂತ್ರಿಕ ಮುಖ್ಯವಾಹಿನಿಯಲ್ಲಿ ಪ್ರವೇಶಿಸಿ, ಸ್ಪರ್ಧಾತ್ಮಕ ರಾಜಕಾರಣದಲ್ಲಿ ಭಾಗವಹಿಸುತ್ತಿರುವುದನ್ನು ಯಚೂರಿಯವರು ಶ್ಲಾಘಿಸುತ್ತಾರೆ. ಈ ನಿಟ್ಟಿನಲ್ಲೇ ಅವರು ಸಿ.ಪಿ.ಎನ್ (ಎಂ) ಮತ್ತು ತಮ್ಮ ಪಕ್ಷವಾದ ಸಿ.ಪಿ.ಎಂ ನಡುವೆ ಸಾಮ್ಯತೆಯನ್ನು ಗುರುತಿಸಲು ಯತ್ನಿಸುತ್ತಾರೆ. ಆದರೆ ಇಲ್ಲೇ ಯಚೂರಿಯವರು ಎಡವುವುದನ್ನೂ ಕಾಣಬಹುದು. ಎಲ್ಲಾ ಕಾಲಗಳಿಗೂ ಅನ್ವಯವಾಗುವಂತಹ ಪ್ರಜಾತಂತ್ರದ ಮುಖ್ಯವಾಹಿನಿಯ ಮಾದರಿಯನ್ನು ಗುರುತಿಸುವುದು ಸಾಧ್ಯವಾಗದ ಮಾತು. ಇಷ್ಟು ವರ್ಷಗಳು ನೇಪಾಳದಲ್ಲಿ ಒಂದು ರೀತಿಯ ಪ್ರಜಾತಂತ್ರದ ಮುಖ್ಯವಾಹಿನಿಯು, ಸ್ಪರ್ಧಾತ್ಮಕ ರಾಜಕಾರಣದೊಡನೆ ಅಸ್ತಿತ್ವದಲ್ಲಿತ್ತು. ಈ ಪ್ರಜಾತಂತ್ರದಲ್ಲಿ ರಾಜನೇ ಮುಖ್ಯಸ್ಥನಾಗಿದ್ದು ಅಲ್ಲಿನ ಸಂವಿಧಾನವು, ಸಂಸತ್ತನ್ನೂ ವಿಸರ್ಜಿಸುವ ಮಟ್ಟಿಗೆ ರಾಜನಿಗೆ ನಿರಂಕುಶ ಅಧಿಕಾರವನ್ನೂ ನೀಡಿತ್ತು. ಇತ್ತೀಚೆಗೆ

ನೇಪಾಳದಲ್ಲಿ ನಡೆದ ಪ್ರಜಾಂದೋಲನವು ಈ ವ್ಯವಸ್ಥೆಯನ್ನು ಕೊನೆಗೊಳಿಸಿ ನೇಪಾಳದಲ್ಲಿ ಪ್ರಜಾತಾಂತ್ರಿಕ ಗಣರಾಜ್ಯವನ್ನು ಸ್ಥಾಪಿಸಲು ಸಫಲವಾಗಿದೆ. ಈ ಪರಿವರ್ತನೆಯನ್ನು ತರುವಲ್ಲಿ ಸಿ.ಪಿ.ಎನ್ (ಎಂ) ಪಕ್ಷವು ಒಂದು ಮಹತ್ವದ ಪಾತ್ರ ವಹಿಸಿದೆ. ನೇಪಾಳದ ಸಂದರ್ಭದಲ್ಲಿ ಪಕ್ಷದ ಈ ಸಾಧನೆಗೆ ಒಂದು ಕ್ರಾಂತಿಕಾರಿ ಮಹತ್ವವಿರುವುದನ್ನೂ ಒಪ್ಪಿಕೊಳ್ಳಬೇಕಾಗುತ್ತದೆ. ಹೊಸ ಸಂವಿಧಾನ ಮತ್ತು ಗಣತಂತ್ರ ವ್ಯವಸ್ಥೆಗಾಗಿ ಆಗ್ರಹಿಸುವುದರ ಮೂಲಕ ಸಿ.ಪಿ.ಎನ್ (ಎಂ) ಪಕ್ಷವು ನೇಪಾಳದಲ್ಲಿ ಒಂದು ಹೊಸ ಪ್ರಜಾತಾಂತ್ರಿಕ ಮುಖ್ಯವಾಹಿನಿಯನ್ನೂ, ಹೊಸ ರೀತಿಯ ಸ್ಪರ್ಧಾತ್ಮಕ ರಾಜಕೀಯಕ್ಕೂ ನಾಂದಿ ಹಾಡುವ ನಿಟ್ಟಿನಲ್ಲಿ ಸಾಗುತ್ತಿದೆ.

ಈ ಬೆಳವಣಿಗೆಗಳು ನೇಪಾಳದಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತದೆ ಎಂಬುದನ್ನು ಕಾದುನೋಡಬೇಕಾಗಿದೆ. ಒಂದು ವೇಳೆ ನೇಪಾಳದಲ್ಲಿ ಪ್ರಭುತ್ವ ಮತ್ತು ರಾಜ ಪ್ರಭುತ್ವವು ಸಂಪೂರ್ಣವಾಗಿ ನಾಶವಾದರೂ, ಅಲ್ಲಿ ಉದಯಿಸಬಹುದಾದ ಹೊಸ ಗಣತಂತ್ರ ವ್ಯವಸ್ಥೆಯು ಒಂದು ಹೊಸ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಪರ್ಯಾವಸಾನ ಹೊಂದುವುದೆಂದು ಹೇಳಲಾಗುವುದಿಲ್ಲ. ಆದರೆ ಪ್ರಸ್ತುತ ನೇಪಾಳದ ಸಂದರ್ಭದಲ್ಲಿ ಈಗಿನ ಸನ್ನಿವೇಶಗಳನ್ನು ಒಂದು ಮನ್ವಂತರ ಹಾದಿ ಎಂದು ಮಾತ್ರ ಹೇಳಬಹುದು. ಯಚೂರಿಯವರು ನೇಪಾಳದಲ್ಲಿನ ಪ್ರಸಕ್ತ ರಾಜಕೀಯ ಸಂದರ್ಭ ಮತ್ತು ಸತ್ವದೊಳಗಿಂದ, ಬಹು ಪಕ್ಷೀಯ ಸ್ಪರ್ಧಾತ್ಮಕ ರಾಜಕಾರಣವನ್ನು ಹೊರತೆಗೆಯಲು ಯತ್ನಿಸುತ್ತಾರೆ. ಪ್ರಚಂಡರವರ (6) ಹೇಳಿಕೆಯು, ಊಳಿಗಮಾನ್ಯ ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ನೀತಿಗಳ ಸಂವಿಧಾನಿಕ ಚೌಕಟ್ಟಿನಲ್ಲೇ ಸ್ಪರ್ಧಾತ್ಮಕ ರಾಜಕೀಯವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಾರಂಭವಾಗುತ್ತದೆ ಎಂದು ಈಗಾಗಲೇ ನಿರ್ಧರಿಸಿದ್ದಾರೆ. ಇದನ್ನೇ ಯಚೂರಿಯವರು ತಮ್ಮ ಪಕ್ಷದ ನಿರ್ಣಯವೆಂಬಂತೆ ಬಿಂಬಿಸಲು ತೊಡಗುತ್ತಾರೆ. ಇಲ್ಲಿ ಗ್ರಹಿಸಬೇಕಾದ ಅಂಶವೆಂದರೆ ನೇಪಾಳದಲ್ಲಿ ಇಡೀ ರಾಜಕೀಯ ಚರ್ಚೆಯು ಸಂವಿಧಾನ ಸಮಿತಿಯ ಚುನಾವಣೆ, ಹೊಸ ಸಂವಿಧಾನದ ತಾತ್ವಿಕ ಒಪ್ಪಿಗೆ, ಸೈನ್ಯದ ಪುನರ್ ಸಂಘಟನೆ, ಈ ಅಂಶಗಳ ಸುತ್ತ ಸುಳಿಯುತ್ತಿದೆ. ಆದರೆ ಯಚೂರಿಯುವರು ಇದಕ್ಕೂ ಮುನ್ನವೇ ಸಂವಿಧಾನಿಕ ಚೌಕಟ್ಟಿನ ಬಗ್ಗೆ ಪ್ರಸ್ತಾಪಿಸಲಾರಂಭಿಸಿದ್ದಾರೆ.

ನೇಪಾಳದ ಮಾವೋವಾದಿಗಳು "20ನೆಯ ಶತಮಾನದ ಕ್ರಾಂತಿಗಳು ಮತ್ತು ಪ್ರತಿಕ್ರಾಂತಿಗಳಿಂದ ಕಲಿಯುವುದು ಸಾಕಷ್ಟಿದೆ" ಎಂದು ಹೇಳುವುದರ ಹಿಂದಿನ ಮರ್ಮ ಏನಿದೆ ಎಂದು ಹೇಳಲಾಗುವುದಿಲ್ಲ. ವಿಶ್ವದ ಎಲ್ಲಾ ಮಾರ್ಕ್ಸ್‌ವಾದಿಗಳಿಗೆ, ಪ್ಯಾರಿಸ್ ಕಮ್ಯೂನ್ ನಡೆದಾಗಿನಿಂದಲೂ ನಡೆದ ಎಲ್ಲಾ ಕ್ರಾಂತಿಗಳಿಂದ ಒಂದು ಅಂಶವನ್ನು ಸ್ಪಷ್ಟವಾಗಿ ಕಲಿಯಬೇಕಾಗಿದೆ. ಕ್ರಾಂತಿ ಎಂದರೆ ರಾಜಕೀಯ ಅಧಿಕಾರ ಗ್ರಹಣ, ಅಂದರೆ

ಕ್ರಾಂತಿಕಾರಿ ಶಕ್ತಿಗಳು ಆಳುವ ವರ್ಗಗಳನ್ನು ಕಿತ್ತೊಗೆದು, ಆ ವರ್ಗಗಳು ಸ್ಥಾಪಿಸಿದ ಪ್ರಭುತ್ವವನ್ನು ನಾಶಗೊಳಿಸುವುದೇ ಒಂದು ರಾಜಕೀಯ ಪ್ರಕ್ರಿಯೆ ಎಂದೇ ವ್ಯಾಖ್ಯಾನಿಸಬೇಕಾಗುತ್ತದೆ. ಈ ರೀತಿಯ ಕ್ರಾಂತಿಕಾರಿ ಪಲ್ಲಟವಾಗದಿದ್ದಲ್ಲಿ, ಎಷ್ಟೇ ಅಭಿವೃದ್ಧಿ ಹೊಂದಿರುವ ಬೂರ್ಷ್ವಾ ಪ್ರಭುತ್ವವಾದರೂ ಅದು ಆಂತರ್ಯದಲ್ಲಿ ಬೂರ್ಷ್ವಾಗಳ ಸರ್ವಾಧಿಕಾರವೇ ಆಗಿರುತ್ತದೆ. ಏಕ ಪಕ್ಷೀಯ ಕಮ್ಯೂನಿಸ್ಟ್ ಆಳ್ವಿಕೆ ಮತ್ತು ಬಹು ಪಕ್ಷೀಯ ಸ್ಪರ್ಧಾತ್ಮಕ ರಾಜಕಾರಣಗಳ ನಡುವೆ ವೈರುಧ್ಯಗಳೇನೇ ಇದ್ದರೂ, ಬಹುತೇಕ ಎಲ್ಲಾ ಬೂರ್ಷ್ವಾ ಪ್ರಭುತ್ವಗಳೂ ದ್ವಿಪಕ್ಷೀಯ ವ್ಯವಸ್ಥೆಗೆ ಸಾಂಸ್ಥಿಕ ಸ್ವರೂಪ ನೀಡುವುದರಲ್ಲಿ ತೊಡಗಿರುವುದನ್ನು ನಾವು ಕಾಣಬಹುದು. ಭಾರತೀಯ ಆಳುವ ವರ್ಗಗಳೂ ಇದೇ ಹಾದಿಯಲ್ಲಿ ಸಾಗುತ್ತಿರುವುದೂ ಸ್ಪಷ್ಟವಾಗಿದೆ. ಅಮೆರಿಕಾ ಬೆಂಬಲಿತ ರಾಜಶಾಹಿಯನ್ನು ತೊಡೆದುಹಾಕಿ, ಒಂದು ಗಣತಾಂತ್ರಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಕಾರ್ಯ ನೇಪಾಳಕ್ಕೆ ಒಂದು ಕ್ರಾಂತಿಕಾರಿ ಹೆಜ್ಜೆಯಾಗಿದೆ. ಒಂದು ವೇಳೆ ಕ್ರಾಂತಿಕಾರಿ ಕಮ್ಯುನಿಸ್ಟ್ ಪಕ್ಷಗಳ ನೇತೃತ್ವದಲ್ಲಿ ಅಂತಹ ಪ್ರಜಾತಂತ್ರ ವ್ಯವಸ್ಥೆ ಸ್ಥಾಪಿತವಾಗಿ, ಸ್ಥಿರವಾಗಿ ನೆಲೆಸಿದರೆ ಅದು ನಮ್ಮ ನೆರೆ ರಾಷ್ಟ್ರದಲ್ಲಿ ನಡೆಯುವ ಒಂದು ಮಹತ್ತರ ಬೆಳವಣಿಗೆ ಎಂದು ಪರಿಗಣಿಸುವುದರಲ್ಲಿ ತಪ್ಪೇನಿಲ್ಲ. ಆದರೆ ಅಲ್ಲಿನ ಬಹು ಪಕ್ಷೀಯ ಸ್ಪರ್ಧಾತ್ಮಕ ರಾಜಕಾರಣವನ್ನು ಉಪಯೋಗಿಸಿಕೊಂಡು, ಆ ರಾಷ್ಟ್ರದ ಮತ್ತು ಅಲ್ಲಿನ ಪ್ರಭುತ್ವದ ವರ್ಗಲಕ್ಷಣಗಳನ್ನು ನಿರ್ಲಕ್ಷಿಸಲಾಗುವುದಿಲ್ಲ.

**ಆಂತರಿಕ ಪರಿಸ್ಥಿತಿಯ ನಿರ್ಲಕ್ಷ್ಯ ಅಪಾಯಕಾರಿ**

ಒಂದೆಡೆ ಸಿ.ಪಿ.ಎಂ ಪಕ್ಷವು ನೇಪಾಳೀ ಮಾವೋವಾದಿಗಳ ಪ್ರೌಢಿಮೆಯ ಬಗ್ಗೆ ಹೆಮ್ಮೆ ಪಡುತ್ತಿದ್ದರೆ, ಇನ್ನೊಂದೆಡೆ ಭಾರತದ ಮಾವೋವಾದಿಗಳು ತಮ್ಮ ನೇಪಾಳೀ ಸಂಗಾತಿಗಳಿಂದ ದೂರ ಸರಿಯುತ್ತಿರುವುದು ವಾಸ್ತವತೆಯಾಗಿದೆ. ಈ ಭಿನ್ನಾಭಿಪ್ರಾಯಗಳನ್ನು ಭಾರತೀಯ ಮಾವೋವಾದಿಗಳ ಅಧಿಕೃತ ವಕ್ತಾರ ಆಝಾದ್‌ರವರು ಪೀಪಲ್ಸ್ ಮಾರ್ಚ್ ಎಂಬ ಪತ್ರಿಕೆಗೆ ನೀಡಿದ ಮುಕ್ತ ಸಂದರ್ಶನದಲ್ಲಿ ಸ್ಪಷ್ಟವಾಗಿ ಪ್ರಚುರಪಡಿಸಿದ್ದಾರೆ. ಈ ಸಂದರ್ಶನದ ನಂತರ ಎರಡೂ ಪಕ್ಷಗಳು ಇನ್ನು ಮುಂದೆ ಈ ವಾದ, ವಿವಾದ ಚರ್ಚೆಗಳನ್ನು ದ್ವಿಪಕ್ಷೀಯ ಮಟ್ಟದಲ್ಲಿ, ರಾಜಕೀಯ, ಸೈದ್ಧಾಂತಿಕ ಮತ್ತು ಕಾರ್ಯಕ್ರಮಗಳ ತಳಹದಿಯ ಮೇಲೆ, ಆಗಾಗ್ಗೆ ನಡೆಸಲಾಗುವುದು ಎಂದು ಹೇಳಿಕೆಯನ್ನೂ ನೀಡಿವೆ. ಬಹುಶಃ ಭಾರತೀಯ ಮಾವೋವಾದಿಗಳು ನೇಪಾಳದ ಮಾವೋವಾದಿಗಳ ಕ್ರಾಂತಿಯು ನೇರ ಪರಿಣಾಮಾತ್ಮಕವಾಗಿ ಕೊನೆಗೊಳ್ಳುವುದನ್ನು ನೋಡಲು ಇಚ್ಛಿಸಿದ್ದರೆನಿಸುತ್ತದೆ. ಹಾಗಾಗಿ ನೇಪಾಳದ ಸಂಗಾತಿಗಳು ಚೀನಾದ ಮಾರ್ಗದಿಂದ ವಿಮುಖರಾಗುವುದನ್ನು ಭಾರತೀಯ ಮಾವೋವಾದಿಗಳು ಸಹಿಸಿಕೊಳ್ಳಲಾಗುತ್ತಿಲ್ಲ.

ವಾಸ್ತವಾಂಶವೆಂದರೆ ನೇಪಾಳದ ಬೆಳವಣಿಗೆಗಳನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ವಿಶ್ಲೇಷಿಸುವುದು ಇಂದಿನ ಅಗತ್ಯತೆಯಾಗಿದೆ. ಪ್ರಸ್ತುತ ನೇಪಾಳದಲ್ಲಿ ರೂಪುಗೊಳ್ಳುತ್ತಿರುವ ಸನ್ನಿವೇಶಗಳ ಬಗ್ಗೆ, ಮನ್ವಂತರದ ಹಾದಿಯ ಬಗ್ಗೆ ಅನೇಕ ವಿಶ್ಲೇಷಕರು, ಚಿಂತಕರು, ಮತ್ತು ನೇಪಾಳಿ ಕಮ್ಯುನಿಸ್ಟ್ ಚಳುವಳಿಯ ವಿವಿಧ ಪಂಗಡಗಳು ಮಾಡುತ್ತಿರುವ ವಿಶ್ಲೇಷಣೆಗಳನ್ನು, ಅಲ್ಲಿನ ಪರಿಸ್ಥಿತಿ ಸ್ಪಷ್ಟವಾಗುವವರೆಗೂ ಕೂಲಂಕುಷವಾಗಿ ವೀಕ್ಷಿಸಬೇಕಾಗುತ್ತದೆ. ಆದರೆ ಭಾರತೀಯ ಮಾವೋವಾದಿಗಳು ನೇಪಾಳದ ಬೆಳವಣಿಗೆಗಳ ಬಗ್ಗೆ ವ್ಯಕ್ತಪಡಿಸುತ್ತಿರುವ ಕಳವಳ ಮತ್ತು ಕಾಳಜಿಗಳು, ಅಲ್ಲಿನ ಕಮ್ಯುನಿಸ್ಟ್ ಪಕ್ಷಗಳ ಭವಿಷ್ಯದ ಪ್ರಶ್ನೆಯನ್ನೂ ಮೀರಿ ಹೋಗುತ್ತಿದೆ. ಈ ಬೆಳವಣಿಗೆಗಳಿಂದ ತಮ್ಮ ಕ್ರಾಂತಿಕಾರಿ ಹಾದಿಯ ಮೇಲೂ ಪರಿಣಾಮವಾಗಿ, ಇಲ್ಲಿ ಹೊಸ ರೀತಿಯ ತಾತ್ವಿಕ ಬಿಕ್ಕಟ್ಟು ಉದಯಿಸಬಹುದೆಂಬ ಆತಂಕವೂ ಇಲ್ಲಿನ ಮಾವೋವಾದಿ ಪಕ್ಷಗಳನ್ನು ಕಾಡುತ್ತಿದೆ.

ಜಾಗತಿಕ ಮಟ್ಟದಲ್ಲಿ ಮಾವೋವಾದವು ನೇಪಾಳ ಮತ್ತು ಭಾರತದಲ್ಲಿ ಪ್ರಮುಖವಾಗಿ ತನ್ನ ಪ್ರಸ್ತುತತೆಯನ್ನು ಕಂಡುಕೊಂಡಿದೆ. 1980 ಮತ್ತು 90ರ ದಶಕದಲ್ಲಿ ಪೆರು ಮತ್ತು ಫಿಲಿಫೈನ್ಸ್ ದೇಶಗಳಲ್ಲಿ ಪ್ರಚಲಿತವಾಗಿದ್ದರೂ, ಇತ್ತೀಚಿನ ದಿನಗಳಲ್ಲಿ ಮಾವೋವಾದಿಗಳು ಅಲ್ಲಿ ಹಿನ್ನಡೆ ಅನುಭವಿಸುತ್ತಿದ್ದಾರೆ. ಈ ಬೆಳವಣಿಗೆಗಳಿಗೆ ಭಾರತದ ಮಾವೋವಾದಿಗಳು ವಿಚಿತ್ರವಾದ ವ್ಯಾಖ್ಯಾನ ನೀಡುತ್ತಾರೆ. 'ಜಾಗತಿಕ ಕಮ್ಯುನಿಸ್ಟ್ ಚಳುವಳಿಯಲ್ಲಿನ ದುರ್ಬಲತೆಯ ಪರಿಣಾಮವಾಗಿ ಕೆಲವು ದಶಕಗಳ ಕಾಲ ಅನೇಕ ಪ್ರಜಾಸಮರಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಡುತ್ತಿವೆ" ಎಂದು ಆಝಾದ್‌ರವರು ಪ್ರತಿಪಾದಿಸುತ್ತಾರೆ. (ಪೀಪಲ್ಸ್ ಮಾರ್ಚ್ ಪು. 26 ಜೂನ್ ಜುಲೈ 06) ಯಾವುದೇ ದೀರ್ಘ ಕಾಲದ ಪ್ರಜಾಸಮರಗಳ ಯಶಸ್ಸು ಜಾಗತಿಕ ಸನ್ನಿವೇಶಗಳನ್ನು ಅವಲಂಬಿಸಿರುತ್ತದೆ. ನೇಪಾಳದ ಮಾವೋವಾದಿಗಳು ಪ್ರಸ್ತುತ ಸನ್ನಿವೇಶದಲ್ಲಿ ಈ ಮಟ್ಟದ ಒಂದು ಸಾಧನೆ ಮಾಡಿದ್ದು, ನೆರೆ ರಾಷ್ಟ್ರವಾದ ಭಾರತದಲ್ಲಿ ಮಾವೋವಾದಿಗಳು ತಮ್ಮ ಉಳಿವಿಗಾಗಿ ಹೋರಾಡುತ್ತಿದ್ದಾರೆಂದರೆ, ಈ ವಿದ್ಯಮಾನವನ್ನು ಜಾಗತಿಕ ಸನ್ನಿವೇಶದ ದುರ್ಬಲತೆಯ ದೃಷ್ಟಿಯಿಂದ ವಿಶ್ಲೇಷಿಸಲಾಗುವುದಿಲ್ಲ. ಬದಲಾಗಿ ಭಾರತ ಮತ್ತು ನೇಪಾಳದಲ್ಲಿನ ವಿಭಿನ್ನ ಆಂತರಿಕ ಪರಿಸ್ಥಿತಿಗಳು, ಹೋರಾಟದ ತಂತ್ರಗಳು ಮತ್ತು ಪಕ್ಷದ ಕಾರ್ಯಕ್ರಮಗಳನ್ನು ಅವಲೋಕಿಸಬೇಕಾಗುತ್ತದೆ. ವಾಸ್ತವ ಆಂತರಿಕ ಸನ್ನಿವೇಶಗಳನ್ನು ಕಡೆಗಣಿಸಿ, ಚೀನಾದ ಮಾದರಿಯನ್ನು ಅಂಧರಂತೆ ಅನುಸರಿಸುವುದರಿಂದಲೇ, ಆಜಾದ್‌ರವರು ತಮ್ಮ ವ್ಯಾಖ್ಯಾನದಲ್ಲಿ ಜಾಗತಿಕ ಪರಿಸ್ಥಿತಿಗಳಿಗೆ ಅಗತ್ಯಕ್ಕಿಂತಲೂ ಹೆಚ್ಚು ಒತ್ತು ನೀಡುತ್ತಾರೆಂದು ಹೇಳಬಹುದು.

ಜುಲೈ 22 2006ರ EPW ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಮಾವೋವಾದದ ಬಗೆಗಿನ ಚರ್ಚೆಯು ಹಿಂಸೆಯ ಪ್ರಶ್ನೆಯನ್ನೇ ಪ್ರಧಾನವಾಗಿರಿಸಿಕೊಂಡಿರುವುದರ ಬಗ್ಗೆ

ಆರ್ಘಾದ್ ಆಕ್ಷೇಪ ವ್ಯಕ್ತಪಡಿಸುತ್ತಾರೆ. ಆದರೆ ಈ ಸಂಚಿಕೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದ ಯಾವುದೇ ಲೇಖಕರೂ ಸಹ ಅಹಿಂಸೆಯನ್ನು ತಾತ್ತ್ವಿಕ ಮಟ್ಟದಲ್ಲಿ ಪ್ರತಿಪಾದಿಸುವವರಲ್ಲ ಎಂಬ ಅಂಶವನ್ನು ಆರ್ಘಾದ್‌ರವರು ಗಮನಿಸಬೇಕು. ಆದಾಗ್ಯೂ, ಇಡೀ ಚರ್ಚೆಯು ಹಿಂಸಾತ್ಮಕ ಹಾದಿಯನ್ನು ಕುರಿತದ್ದಾಗಿದ್ದರೆ, ಇದೇ ಪತ್ರಿಕೆಯ ಅಕ್ಟೋಬರ್ 14 2006ರ ಸಂಚಿಕೆಯಲ್ಲಿ ಆರ್ಘಾದ್‌ರವರೂ ಇದೇ ನೆಲೆಗಟ್ಟಿನಲ್ಲೇ ವಾದಿಸುತ್ತಾರೆ, ಇಡೀ ಪ್ರಶ್ನೆಯನ್ನು ಮಾವೋವಾದಿಗಳು ಅನುಸರಿಸುತ್ತಿರುವ ನಿರ್ದಿಷ್ಟ ಹೋರಾಟದ ಮಾರ್ಗದಲ್ಲೇ ಕಂಡುಕೊಳ್ಳಬೇಕಲ್ಲವೇ? ಯಾವುದೇ ರೀತಿಯ ಸಮೂಹ ಚಳುವಳಿಗಳನ್ನು ಬೆಂಬಲಿಸದೆ, ರಾಜಕೀಯ ಕಾರ್ಯಕ್ರಮಗಳನ್ನು ರೂಪಿಸದೆ, ಕೇವಲ ಸಶಸ್ತ್ರ ಹೋರಾಟವನ್ನೇ ಹೆಚ್ಚಾಗಿ ಅವಲಂಬಿಸುವ ಮೂಲಕ, ಮಾವೋವಾದಿಗಳು ಹಿಂಸೆಯನ್ನೇ ತಮ್ಮ ಕ್ರಾಂತಿಯ ಮಾರ್ಗದ ಎದ್ದು ಕಾಣುವ ವಿಚಾರವನ್ನಾಗಿ ಮಾಡಿದ್ದಾರೆ ಎಂದರೆ ತಪ್ಪಾಗಲಾರದು.

ಜನ ಸಾಮಾನ್ಯರು ದಿನೇ ದಿನೇ ಹೆಚ್ಚಿನ ಸಂಖ್ಯೆಯಲ್ಲಿ ನಿರ್ಗತಿಕರಾಗುತ್ತಿರುವಾಗ, ಪ್ರಭುತ್ವವು ತನ್ನ ಹಿಂಸಾತ್ಮಕ ಸ್ವರೂಪವನ್ನು ತೀವ್ರಗೊಳಿಸುತ್ತಿರುವ ಈ ಸಂದರ್ಭದಲ್ಲಿ, ಪ್ರಜೆಗಳು ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುವ ನಿಟ್ಟಿನಲ್ಲಿ ಮತ್ತು ಪ್ರಭುತ್ವದ ವಿರುದ್ಧ ಹೋರಾಡುವ ನಿಟ್ಟಿನಲ್ಲಿ ಯಾವ ರೀತಿ ಸಂಘಟಿತರಾಗಬಹುದು ಎಂದು ಸಲಹೆ ನೀಡುವಂತೆ ಆರ್ಘಾದ್‌ರವರು EPW ಸಂಚಿಕೆ ಲೇಖಕರನ್ನು ಪ್ರಶ್ನಿಸುತ್ತಾರೆ. ಹೀಗೆ ಪ್ರಶ್ನಿಸುತ್ತಲೇ "ಒಂದು ಪರ್ಯಾಯ ಮಾರ್ಗವನ್ನು ಸೂಚಿಸದೆ, ಮಾವೋವಾದವನ್ನು ನಿರಾಕರಿಸುವುದರಿಂದ, ಶ್ರೀಮಂತರು ತಮ್ಮ ಶ್ರೀಮಂತಿಕೆಯನ್ನು ಮೆರೆಯುತ್ತಿರುವಾಗಲೇ, ಜನರನ್ನು ಇನ್ನೂ ಹೆಚ್ಚು ಸಂಕಷ್ಟಕ್ಕೆ, ದಾರಿದ್ರ್ಯಕ್ಕೆ ತಳ್ಳಿದಂತಾಗುತ್ತದೆ" ಎಂದೂ ಆರ್ಘಾದ್ ಪ್ರತಿಪಾದಿಸುತ್ತಾರೆ. ಸತ್ಯಾಂಶ ಹೇಳಬೇಕೆಂದರೆ, ದೇಶದಲ್ಲಿ ಲಕ್ಷಾಂತರ ರೈತಾಪಿ, ದುಡಿಯುವ ಜನತೆ ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಪ್ರಭುತ್ವದೊಡನೆ ನಿರಂತರವಾದ ಹೋರಾಟ ನಡೆಸುತ್ತಲೇ ಇದ್ದಾರೆ. ಆದರೆ ಆರ್ಘಾದ್ ಮತ್ತವರ ಸ್ವಯಂ ನಿರ್ಮಿತ ಮಾವೋವಾದಿ ಪಡೆಗಳು ಈ ದಿನ ನಿತ್ಯದ ಹೋರಾಟಗಳಿಂದ ದೂರವಾಗಿಯೇ ಇರುತ್ತಾರೆ. ತಮಗೆ ಸಲಹೆಗಳನ್ನು ನೀಡುವಂತೆ ಇತರರನ್ನು ದುರಹಂಕಾರದಿಂದ ಪ್ರಶ್ನಿಸುವ ಬದಲು, ಆರ್ಘಾದ್‌ರವರು, ಮಾವೋವಾದಿ ಪಡೆಗಳ ಹೋರಾಟಗಳಿಂದ ಜನರು ಹೇಗೆ ತಮ್ಮ ಉತ್ತಮ ಜೀವನಕ್ಕಾಗಿ, ಪ್ರಭುತ್ವದ ವಿರುದ್ಧ ಸೆಣಸಲು ಸಂಘಟಿತರಾಗುತ್ತಿದ್ದಾರೆ ಎಂದು ತೋರಿಸಬಹುದಿತ್ತಲ್ಲವೇ?

ಈ ಪ್ರಶ್ನೆ ಆರ್ಘಾದ್‌ರವರ ಪ್ರತಿಪಾದನೆಯಿಂದಲೇ ಉದ್ಭವಿಸುತ್ತದೆ. ಆಂಧ್ರ ಪ್ರದೇಶ ಮತ್ತು ಛತ್ತೀಸ್‌ಘಡದಲ್ಲಿ ಪ್ರಸ್ತುತ ಕಂಡುಬರುವ ಭೂಮಿ ಹೋರಾಟಗಳು ಮತ್ತು ಜನ ಪರ ಯೋಜನೆಗಳೆಲ್ಲವೂ, ಮಿಲಿಟರಿ ಕಾರ್ಯಾಚರಣೆ ತೀವ್ರವಾಗುವ ಮುನ್ನ

ನಡೆದಿದ್ದವೆಂದು ಆಝಾದ್‌ರವರೇ ಹೇಳುತ್ತಾರೆ. ಬಿಹಾರ ಮತ್ತು ಝಾರ್ಖಂಡ್‌ಗಳಲ್ಲಿ ಭೂ ಮರು ಹಂಚಿಕೆ ಚಳುವಳಿ ಮತ್ತು ತಮ್ಮ ಜೀವನದ ಹಕ್ಕಿಗಾಗಿ, ಸ್ವಾಭಿಮಾನಕ್ಕಾಗಿ, ರಾಜಕೀಯ ಅಸ್ಥಿತ್ವಕ್ಕಾಗಿ ನಡೆಯುತ್ತಿರುವ ಗ್ರಾಮೀಣ ಬಡ ಜನತೆಯ ಹೋರಾಟಗಳು, ಪರಿಷ್ಕರಣವಾದಿಗಳಾದ ಲಿಬರೇಷನ್ ಪಕ್ಷದ ನೇತೃತ್ವದಲ್ಲೇ ನಡೆಯುತ್ತಿದೆ ಎಂದು ಆಝಾದ್‌ರವರು ಹೀಗಳೆಯುತ್ತಾರೆ. ಒರಿಸ್ಸಾ ಮತ್ತು ಆಂಧ್ರದ ಕರಾವಳಿ ತೀರದ ಪೂರ್ವ ಗೋದಾವರ ಜಿಲ್ಲೆಗಳಲ್ಲೂ ಇದೇ ವಿದ್ಯಮಾನವನ್ನು ಕಾಣಬಹುದು. ಆಂಧ್ರದಲ್ಲಿ ಮತ್ತು ಅವಿಭಜಿತ ಬಿಹಾರದಲ್ಲಿ 1980ರ ದಶಕದಲ್ಲಿ ಪೀಪಲ್ಸ್ ವಾರ್ ಗ್ರೂಪ್ (PWG) ಮತ್ತು ಪಾರ್ಟಿ ಯೂನಿಟಿ ಪಕ್ಷಗಳು ಕೆಲವು ಊಳಿಗಮಾನ್ಯ ವಿರೋಧಿ ಹೋರಾಟಗಳನ್ನು ಹೂಡಿದ್ದವು. ಆದರೆ ನಂತರದ ದಿನಗಳಲ್ಲಿ ಈ ಹೋರಾಟಗಳನ್ನು ಕೈಬಿಟ್ಟು, ಮಾವೋವಾದಿಗಳು ಅರಾಜಕತಾ ಸೈನ್ಯಾಚರಣೆಯಲ್ಲಿ ಮುಳುಗಿಹೋಗಿದ್ದು ಮಾತ್ರ ಕಟುವಾಸ್ತವ.

### ಬೂರ್ಷ್ವಾ ಸಮಾಜದಲ್ಲಿ ರಾಜಕೀಯದ ನಿರಾಕರಣ

ಅರಾಜಕತೆ ಎನ್ನುವ ಪದ ಬಳಸಿದಾಗ ಆಝಾದ್‌ರವರು ವಿಚಲಿತರಾಗುತ್ತಾರೆ. ಆದರೆ ತಮ್ಮ ಪ್ರತ್ಯುತ್ತರದಲ್ಲಿ ಅವರು ಮಂಡಿಸಿರುವ ವಾದಗಳೇ ಈ ಪದದ ಬಳಕೆಯನ್ನು ಸಮರ್ಥಿಸುತ್ತದೆ. ನಾವು ಅರಾಜಕತೆ ಎಂಬ ಪದವನ್ನು ಸಶಸ್ತ್ರ ಹೋರಾಟದ ಸಂಕ್ಷಿಪ್ತ ಪದವನ್ನಾಗಿ ಬಳಸುತ್ತಿಲ್ಲ ಎಂದು ಸ್ಪಷ್ಟಪಡಿಸುತ್ತೇವೆ. ಮಾರ್ಕ್ಸ್‌ವಾದಿಗಳಾಗಿ, ಅರಾಜಕತೆಯು ಗಾಂಧೀವಾದದಿಂದ ಹಿಡಿದು ಸಶಸ್ತ್ರ ಕಾರ್ಯಾಚರಣೆಯ ಎಲ್ಲಾ ರೂಪಗಳಲ್ಲೂ ಪ್ರಕಟಗೊಳ್ಳುತ್ತದೆ ಎಂಬ ಸತ್ಯಾಂಶದ ಅರಿವು ನಮಗಿದೆ. ಇಲ್ಲಿ ನಾವು ಅರಾಜಕತೆಯನ್ನು ಲೆನಿನ್‌ರವರ ವ್ಯಾಖ್ಯಾನವನ್ನಾಧರಿಸಿ ಸೂಚಿಸುತ್ತಿದ್ದೇವೆ. "ಅರಾಜಕತೆಯು ಹತಾಶೆಯ ಸಂಕೇತ. ದುಡಿಯುವ ವರ್ಗಗಳ ಹೋರಾಟಗಳನ್ನು ಸರಿಯಾಗಿ ಗ್ರಹಿಸದಿರುವುದು, ಬೂರ್ಷ್ವಾ ಸಮಾಜದಲ್ಲಿ ರಾಜಕೀಯವನ್ನೇ ನಿರಾಕರಿಸುವುದು, ಕಾರ್ಮಿಕರ ಸಂಘಟನೆ ಮತ್ತು ಶಿಕ್ಷಣದ ಮಹಿಮೆಯನ್ನು ನಿರ್ಲಕ್ಷಿಸುವುದು, ಒಮ್ಮುಖವಾದ-ಪರಸ್ಪರ ಸಂಬಂಧವಿಲ್ಲದ ಪರಿಹಾರ ಮಾರ್ಗಗಳನ್ನು ಸೂಚಿಸುವುದು, ರಾಜಕೀಯದ ನಿರಾಕರಣ ಪ್ರಕ್ರಿಯೆಯಲ್ಲಿ ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಬೂರ್ಷ್ವಾ ರಾಜಕಾರಣಕ್ಕೆ ಅಡಿಯಾಳಾಗಿ ಪರಿಗಣಿಸುವುದು" ಅರಾಜಕತೆಯ ಲಕ್ಷಣಗಳೆಂದು ಲೆನಿನ್ ವ್ಯಾಖ್ಯಾನಿಸುತ್ತಾರೆ. (ಲೆನಿನ್ ಬರಹಗಳ ಸಂಗ್ರಹ ಸಂಪುಟ 5 ಪುಟ 327-8).

ಆಝಾದ್‌ರವರ ಚಿಂತನಾ ಲಹರಿ ಮತ್ತು ತರ್ಕಕ್ಕೆ, ಲೆನಿನ್‌ರವರ ಈ ವ್ಯಾಖ್ಯಾನವು ಎಷ್ಟು ಸರಿಯಾಗಿ ತಾಳೆಯಾಗುತ್ತದೆ? ಆಝಾದ್‌ರವರ ಅಭಿಪ್ರಾಯದಲ್ಲಿ ಮಾವೋವಾದಿ ಪಥವನ್ನು ನಿರಾಕರಿಸುವುದರಿಂದ ಜನರನ್ನು ಇನ್ನೂ ಹೆಚ್ಚು ಹೆಚ್ಚಾಗಿ ಹತಾಶೆಯೆಡೆಗೆ

ತಳ್ಳಿದಂತಾಗುತ್ತದೆ. ಅಂದರೆ ಅವರ ಅಭಿಪ್ರಾಯದಲ್ಲಿ ಮಾವೋವಾದಿ ಪಥ ಮತ್ತು ಜನರ ಹತಾಶೆಯು ಪರಸ್ಪರ ಸಂಬಂಧಿತವಾಗಿದ್ದು, ಹತಾಶೆಯ ಪ್ರಮಾಣವನ್ನು ಮಾತ್ರ ವಿಶ್ಲೇಷಿಸಬಹುದಾಗಿದೆ. ಇದು ಅರಾಜಕತೆಯ ಲಕ್ಷಣವೇ ಹೊರತು, ಕ್ರಾಂತಿಕಾರಿ ಹಿಂಸಾತ್ಮಕ ವಾದವಾಗಲೀ, ಮಾವೋರವರ ನಿರಂತರ ಪ್ರಜಾಂದೋಲನವಾಗಲೀ ಈ ವ್ಯಾಖ್ಯಾನದ ಪರಿಧಿಗೆ ಒಳಪಡುವುದಿಲ್ಲ. EPW ಸಂಚಿಕೆಯಲ್ಲಿ ಬರೆದ ಲೇಖಕರು, ಜನರಿಗೆ ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು, ಪ್ರಭುತ್ವದ ವಿರುದ್ಧ ಹೋರಾಡಲು ಸಲಹೆಗಳನ್ನು ನೀಡಬೇಕೆಂದು ಆಝಾದ್ ಅಪೇಕ್ಷಿಸುತ್ತಾರೆ. ಈ ವಿದ್ಯಮಾನವನ್ನೇ ಲೆನಿನ್‌ರವರು "ದುಡಿಯುವ ವರ್ಗಗಳ ವರ್ಗ ಹೋರಾಟವನ್ನು ಗ್ರಹಿಸುವಲ್ಲಿನ ವೈಫಲ್ಯ" ಎಂದು ಅರ್ಥೈಸುತ್ತಾರೆ. ಆಝಾದ್‌ರವರಿಗೆ ನಿತ್ಯ ನಿಜ ಜೀವನದಲ್ಲಿ ದುಡಿಯುವ ವರ್ಗಗಳು, ರೈತಾಪಿ ವರ್ಗಗಳು ನಡೆಸುತ್ತಿರುವ ವರ್ಗ ಹೋರಾಟಗಳಿಗೆ ಯಾವುದೇ ಅರ್ಥವಾಗಲೀ ಮಹತ್ವವಾಗಲೀ ಇರುವುದಿಲ್ಲ. ಅವರಿಗೆ ಮಾವೋವಾದದ ಅನುಷ್ಠಾನವನ್ನೇ ಮುಖ್ಯವಾಗುತ್ತದೆ. ಸರಳ ಭಾಷೆಯಲ್ಲಿ ಹೇಳುವುದಾದರೆ ಇದು ಮಾವೋರವರ ಸಿದ್ಧಾಂತಗಳ ವ್ಯಂಗ್ಯವಷ್ಟೇ.

ಲೆನಿನ್‌ರವರು "ಬೂರ್ಷ್ವಾ ಸಮಾಜದಲ್ಲಿ ರಾಜಕೀಯದ ನಿರ್ಲಕ್ಷ್ಯವು ಅರಾಜಕತೆಯ ಇನ್ನೊಂದು ಲಕ್ಷಣ" ಎಂದು ವ್ಯಾಖ್ಯಾನಿಸುತ್ತಾರೆ. ಈ ಲಕ್ಷಣವೂ ಸಹ ವರ್ಗ ಹೋರಾಟದ ಪ್ರೇರಕ ಶಕ್ತಿಯನ್ನು ಗ್ರಹಿಸದೆ ಇರುವುದರಿಂದ ಮೂಡುತ್ತದೆ. ಯಾವುದೇ ಒಂದು ಸಮಾಜವು ವರ್ಗ ವಿಭಜಿತವಾಗಿರುತ್ತದೆ ಮತ್ತು ಆಧುನಿಕ ರಾಜಕೀಯ ವ್ಯವಸ್ಥೆಯಲ್ಲಿ ಈ ವರ್ಗಗಳನ್ನು ರಾಜಕೀಯ ಪಕ್ಷಗಳು ಪ್ರತಿನಿಧಿಸುತ್ತವೆ ಎಂಬ ಅಂಶ ಯಾವುದೇ ಮಾರ್ಕ್ಸ್‌ವಾದದ ವಿದ್ಯಾರ್ಥಿಗೆ ತಿಳಿದಿರಲೇಬೇಕು. ವಿವಿಧ ರಾಜಕೀಯ ಪಕ್ಷಗಳ ನಿಲುವುಗಳು ಮತ್ತು ವಿವಿಧ ಪಕ್ಷಗಳು ಪ್ರಚುರ ಪಡಿಸುವ ವಿವಿಧ ಸಿದ್ಧಾಂತಗಳು ಮತ್ತು ಕಾರ್ಯಕ್ರಮಗಳೇ, ವರ್ಗ ಹೋರಾಟದ ಕ್ಷೇತ್ರವೂ, ಅಭಿವ್ಯಕ್ತಿಯೂ ಆಗಿರುತ್ತದೆ. ನಮ್ಮ ಮಾವೋವಾದಿ ಗೆಳೆಯರಿಗೆ, ತಮ್ಮ ಪಕ್ಷವೊಂದನ್ನು ಹೊರತುಪಡಿಸಿ ಬೇರೆಲ್ಲಾ ರಾಜಕೀಯ ಪಕ್ಷಗಳು ಪರಿಷ್ಕರಣವಾದಿಯೂ, ಪ್ರತಿಗಾಮಿಯೂ ಆಗಿರುತ್ತವೆ. ಹಾಗಾಗಿ ಈ ಪಕ್ಷಗಳೊಡನೆ ಅವರಿಗೆ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ಮೇಲಿನಿಂದ ಜನರ ಮೇಲೆ ಹೇರಲಾಗಿರುವ, ಬೂರ್ಷ್ವಾ ಕ್ರಾಂತಿಯ ಫಲವಾಗಿ ಮೂಡಿರುವ ಸಂಸತ್ತು ಸಹ ಜನರನ್ನು ಮರಳುಮಾಡುವ ಒಂದು ಸಂಸ್ಥೆ ಎಂದು ಪರಿಗಣಿಸುವ ಮಾವೋವಾದಿಗಳ ಅಭಿಪ್ರಾಯದಲ್ಲಿ, ದೇಶದ ಸಂಸತ್ತೂ ಸಹ ನಗಣ್ಯವೇ. ಹಾಗಾಗಿ ಭಾರತೀಯ ಬೂರ್ಷ್ವಾಗಳ ಸಂಸತ್ತು ಸಹ ಅಷ್ಟೇ ನಕಾರಾತ್ಮಕವಾಗುವುದರಲ್ಲಿ ಅಚ್ಚರಿಯೇನಿಲ್ಲ.

ನಿಜ ಜೀವನದ ರಾಜಕೀಯ ಪಕ್ಷಗಳನ್ನು ಮತ್ತು ರಾಜಕೀಯ ಸಂಸ್ಥೆಗಳನ್ನು ನಿರ್ಲಕ್ಷಿಸುವ ಆಝಾದ್ ಮತ್ತವರ ಗೆಳೆಯರು ವರ್ಗಗಳನ್ನು ಕೇವಲ ಭ್ರಮಾಲೋಕದಲ್ಲೇ

ವಿಶ್ಲೇಷಿಸುತ್ತಾರೆ. ಎಡ ಪಕ್ಷಗಳ ಐಕ್ಯತೆ, ಎಡ ಮತ್ತು ಪ್ರಜಾತಾಂತ್ರಿಕ ಶಕ್ತಿಗಳ ವೇದಿಕೆ ಮುಂತಾದವುಗಳನ್ನು ಹೀಗಳೆಯುವ ಆರ್ಘಾದ್ ಮತ್ತವರ ಗೆಳೆಯರು, ಅಂತಹ ಒಂದು ಕಿಚಡಿ ವೇದಿಕೆಯ ಬದಲು, ಕಾರ್ಮಿಕ-ರೈತ-ಮಧ್ಯಮ ವರ್ಗ-ರಾಷ್ಟ್ರೀಯ ಬೂರ್ಷ್ವಾಗಳ ಒಂದು ಸಂಯುಕ್ತ ವೇದಿಕೆಯನ್ನು ಪ್ರಸ್ಥಾಪಿಸುತ್ತಾರೆ. ಈಗ ಈ ವರ್ಗಗಳ ಬಹುತೇಕ ಜನರನ್ನು ವಿವಿಧ ರಾಜಕೀಯ ಪಕ್ಷಗಳು ಸಂಘಟಿಸಿ ಅವರ ಮೇಲೆ ತಮ್ಮ ಹಿಡಿತವನ್ನು ಸಾಧಿಸಿವೆ. ಇದು ಇಂದಿನ ಸಾಮಾಜಿಕ ವಾಸ್ತವತೆಯ ರಾಜಕೀಯ ಮುಖಲಕ್ಷಣವಾಗಿದೆ. ಆರ್ಘಾದ್‌ರವರಿಗೆ ಈ ನಿರ್ದಿಷ್ಟ ವೇದಿಕೆಯು ಕಿಚಡಿಯಾಗಿ ಕಂಡರೆ, ಭ್ರಮೆಯಾಗಿರುವುದು ವಾಸ್ತವವಾಗಿ ಕಾಣುತ್ತದೆ. ಅವರು ಪ್ರತಿಪಾದಿಸಿದಂತೆ ನಾಲ್ಕು ವರ್ಗಗಳ ಸಂಯುಕ್ತ ವೇದಿಕೆಯನ್ನು ಸ್ಥಾಪಿಸಿದಲ್ಲಿ, ಈ ವರ್ಗಗಳ ಜನತೆಯನ್ನು ತಮ್ಮೆಡೆಗೆ ಸೆಳೆಯಲು ರಾಜಕೀಯ ಸಂಘರ್ಷವನ್ನು ಮಾಡಲೇಬೇಕಾಗುತ್ತದೆ. ಗತಿತಾರ್ಕಿಕವಾದವನ್ನು ಗ್ರಹಿಸುವ ನಮಗೆ ತಿಳಿದಿರುವ ಒಂದು ಸತ್ಯವೆಂದರೆ, ಸಂಘರ್ಷದೊಡನೆ ಐಕ್ಯತೆಯೂ ಇರುತ್ತದೆ. ವೈರುಧ್ಯಗಳ ನಡುವಿನ ಸಂಘರ್ಷವು ನಿರಂತರವೂ, ನಿರುಪಾಧಿಕವೂ (Permanent) ಆಗಿದ್ದರೆ, ಐಕ್ಯತೆಯು ತಾತ್ಕಾಲಿಕವೂ ಸೋಪಾದಿಕವೂ (Conditional) ಆಗಿರುತ್ತದೆ. ಸಂಘರ್ಷ ಮತ್ತು ಐಕ್ಯತೆಯನ್ನೊಳಗೊಂಡ ರಾಜಕೀಯ ಪ್ರಕ್ರಿಯೆ ಇಲ್ಲದಿದ್ದಲ್ಲಿ, ಜನರನ್ನು ಗೆಲ್ಲುವುದು ಸಾಧ್ಯವಾಗುವುದಿಲ್ಲ. ಕೇವಲ ಭ್ರಾಂತಿಗಳಿಂದ ಕೂಡಿದ ಕ್ರಾಂತಿಕಾರಿ ಘೋಷಣೆಗಳಿಂದಲೂ ಜನರನ್ನು ಗೆಲ್ಲಲಾಗುವುದಿಲ್ಲ. ನಾವು ಪ್ರತಿಪಾದಿಸುವ ಎಡ ಮತ್ತು ಪ್ರಜಾತಾಂತ್ರಿಕ ಶಕ್ತಿಗಳ ಸಂಯುಕ್ತ ವೇದಿಕೆಯು ಈ ಪ್ರಕ್ರಿಯೆಗೆ ಪೂರಕವಾಗಿರುತ್ತದೆ. ಇಲ್ಲಿ ಗ್ರಹಿಸಬೇಕಾದ ಮತ್ತೊಂದು ಅಂಶವೆಂದರೆ ರಾಜಕೀಯ ಶೂನ್ಯದಲ್ಲಿ ಸೈನ್ಯಾಚರಣೆಯನ್ನು ಸ್ಥಾಪಿಸಲಾಗಲೀ, ಕಾಪಾಡುವುದಾಗಲೀ ಸಾಧ್ಯವಾಗುವುದಿಲ್ಲ.

ನಮ್ಮ ಮಾವೋವಾದಿ ಗೆಳೆಯರು ರಾಜಕೀಯ ಪ್ರಕ್ರಿಯೆಯಲ್ಲಿ ಕಮ್ಯುನಿಸ್ಟರ ಹಸ್ತಕ್ಷೇಪವನ್ನು ಸುತರಾಂ ಒಪ್ಪುವುದಿಲ್ಲ. ಗತಿತಾರ್ಕಿಕ ಸಿದ್ಧಾಂತದ ಪ್ರಕಾರ ಸ್ವಾತಂತ್ರ್ಯವೆಂದರೆ ಅಗತ್ಯತೆಗಳನ್ನು ಗ್ರಹಿಸುವುದೇ ಆಗಿರುತ್ತದೆ. ರಾಜಕೀಯ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡಬೇಕಾದ ಅಗತ್ಯತೆಗಳನ್ನು ಗುರುತಿಸಲು ನಿರಾಕರಿಸಿದಾಗ, ನಾವು ಅಷ್ಟೇ ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತೇವೆ. ಮಾವೋವಾದಿಗಳು ರಾಜಕೀಯ ವಾಸ್ತವತೆಯಿಂದ ಪಲಾಯನಗೈಯಲು ಆಗುವುದಿಲ್ಲ. ವ್ಯವಸ್ಥೆಯು ರೂಪಿಸುವ ಸನ್ನಿವೇಶಗಳಿಗನುಸಾರವಾಗಿ ಅದರೊಡನೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಮಾವೋವಾದಿಗಳ ಸುದೀರ್ಘ ಇತಿಹಾಸ, ಸೈನ್ಯದ ಬಲ ಮತ್ತು ಜನರ ಮೇಲಿನ ಹಿಡಿತ ಎಷ್ಟೇ ಇದ್ದರೂ, ಆಂಧ್ರ ಪ್ರದೇಶದಲ್ಲಿ ಮಾವೋವಾದಿಗಳು, ಕಾಂಗ್ರೆಸ್ ಮತ್ತು ತೆಲುಗು ದೇಶಂ ಪಕ್ಷಗಳ ನಡುವೆ ಸಿಲುಕಿದ

ಫುಟ್‌ಬಾಲಿನಂತಾಗಿರುವುದಂತೂ ಕಟು ಸತ್ಯ. ಆಂಧ್ರ ಪ್ರದೇಶದ ಕಳೆದ ವಿಧಾನ ಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಗೆಲುವು ದೊರಕಿಸಿಕೊಡಲು, ಮಾವೋವಾದಿಗಳು ತಮ್ಮ ಸಾಂಪ್ರದಾಯಿಕ ಚುನಾವಣಾ ಬಹಿಷ್ಕಾರ ನೀತಿಯನ್ನು ಕೈಬಿಡಬೇಕಾಯಿತು. ಬಿಹಾರದಲ್ಲಿ ರಾಷ್ಟ್ರೀಯ ಜನತಾ ದಳದೊಡಗಿನ ಅವರ ಮೈತ್ರಿ ಎಲ್ಲರಿಗೂ ತಿಳಿದೇ ಇದೆ. ತಮ್ಮ ಹತ್ತು ವರ್ಷಗಳ ಆಳ್ವಿಕೆಯಲ್ಲಿ ಚಂದ್ರ ಬಾಬು ನಾಯ್ಡುರವರು ಆಂಧ್ರ ಪ್ರದೇಶವನ್ನು ವಿಶ್ವ ಬ್ಯಾಂಕ್ ನೀತಿಗಳ ಪ್ರಯೋಗಶಾಲೆಯನ್ನಾಗಿ ಮಾಡಿ ಹತ್ತಿ ಮತ್ತು ಶೇಂಗಾ ಬೆಳೆಗಾರರಿಗೆ ಮಸಣ ಸದೃಶ ಸಮಾಜವನ್ನು ನಿರ್ಮಾಣ ಮಾಡಿದ ಹಂತದಲ್ಲಿ, ಆಂಧ್ರದಲ್ಲಿ PWG ನಾಯ್ಡುರವರನ್ನು ಹತ್ಯೆಗೆಯ್ಯುವ ವಿಫಲ ಯತ್ನವನ್ನಲ್ಲದೆ ಬೇರೇನೂ ಸಾಧಿಸಲಾಗಲಿಲ್ಲ. ಕಾಂಗ್ರೆಸ್ ಪುನಃ ಅಧಿಕಾರಕ್ಕೆ ಬಂದ ನಂತರ ಮಾವೋವಾದಿಗಳು ಸರ್ಕಾರದೊಡನೆ ಮಾತುಕತೆಯಲ್ಲಿ ತೊಡಗಿದ್ದೇ ಅಲ್ಲದೆ ಸರ್ಕಾರವು ತನ್ನ ಆಶ್ವಾಸನೆಗಳನ್ನು ಈಡೇರಿಸದೇ ಹೋದಾಗ, ಯಾವುದೇ ಕ್ರಮ ಕೈಗೊಳ್ಳಲು ವಿಫಲವಾದದ್ದು ಮಾವೋವಾದಿಗಳ ಅತಿ ದೊಡ್ಡ ವೈಫಲ್ಯವೆಂದೇ ಹೇಳಬಹುದು.

**ಜನತೆಯ ಸ್ವತಂತ್ರ ರಾಜಕೀಯ ಕ್ರಿಯಾಶೀಲತೆಯ ಅವಶ್ಯಕತೆ**

EPW ವಿಶೇಷ ಸಂಚಿಕೆಯಲ್ಲಿ ಪ್ರಕಟಗೊಂಡ ಅನೇಕ ಲೇಖನಗಳು, ಮಾವೋವಾದಿ ನಾಯಕತ್ವದ ಚಳುವಳಿಗಳು ಈ ದೇಶದ ರಾಜಕೀಯ-ಆರ್ಥಿಕ ಕ್ಷೇತ್ರಗಳಲ್ಲಿ ಉಂಟುಮಾಡುತ್ತಿರುವ ಪ್ರಭಾವಗಳಿಗೆ ಮಾನ್ಯತೆಯನ್ನು ನೀಡುತ್ತಿವೆ ಎಂದು ಆಝಾದ್ ನಂಬಿದ್ದಾರೆ. ಆದರೆ ಮಾಧ್ಯಮಗಳಲ್ಲೂ ಸಹ ಮಾವೋವಾದಿಗಳ ಸಶಸ್ತ್ರ ಹೋರಾಟಗಳ ಬಗ್ಗೆ ಅನೇಕ ಚರ್ಚೆಗಳು ನಡೆಯುತ್ತಲೇ ಇವೆ. ಅಧಿಕೃತ ಸರ್ಕಾರಿ ವಲಯಗಳಲ್ಲೂ, ಶೈಕ್ಷಣಿಕ ಕ್ಷೇತ್ರದಲ್ಲೂ ಈ ಚರ್ಚೆಗಳು ನಡೆಯುತ್ತಲೆ ಇವೆ. ಆದರೆ ಈ ಚರ್ಚೆಗಳ, ಸಂವಾದಗಳ ಸ್ವರೂಪವೇನು, ಲಕ್ಷಣಗಳೇನು ಎಂಬುದೇ ಇಲ್ಲಿ ಮುಖ್ಯವಾಗುತ್ತದೆ. ಬಹುತೇಕವಾದ ಚರ್ಚೆಗಳು ಮಾಧ್ಯಮಗಳ ರಂಜನೆಗಾಗಿ ಸೀಮಿತವಾಗಿದ್ದರೆ, ಉಳಿದಂತೆ ಕೆಲವು ಸಂವಾದಗಳು ಒಂದೆಡೆ ಕಾನೂನು ಸುವ್ಯವಸ್ಥೆ - ಆಂತರಿಕ ಸುಭದ್ರತೆಗಳನ್ನು ಕುರಿತಂತೆ ಇದ್ದರೆ ಮತ್ತೊಂದೆಡೆ ಪರ್ಯಾಯ ಅಭಿವೃದ್ಧಿ ಪಥ ಮತ್ತು ಪ್ರಜಾತಾಂತ್ರಿಕ ಹಕ್ಕುಗಳ ಮಟ್ಟಿಗೆ ಸೀಮಿತವಾಗಿವೆ. EPWದಲ್ಲಿ ಪ್ರಕಟಗೊಂಡ ಲೇಖನಗಳಲ್ಲೂ ಸಹ, ಹಿಂಸಾತ್ಮಕ ಮಾರ್ಗಗಳ ಬಗ್ಗೆಯೇ ಹೆಚ್ಚು ಒತ್ತು ನೀಡಲಾಗಿರುವುದೇ ಹೊರತು, ಸಾಮಾನ್ಯ ಜನತೆಯ ಸಂಕಷ್ಟಗಳಾಗಲೀ, ಅವುಗಳನ್ನು ನಿವಾರಿಸುವಲ್ಲಿ ಮಾವೋವಾದಿಗಳ ಪಾತ್ರದ ಬಗ್ಗೆಯಾಗಲೀ ವಿಶ್ಲೇಷಣೆಯಾಗಿಲ್ಲ ಎಂದು ಆಝಾದ್ ರವರೇ ಪ್ರತಿಪಾದಿಸುತ್ತಾರೆ. ಇದರಲ್ಲಿ ಅಚ್ಚರಿಯಾಗುವಂತಹ ಅಂಶವೇನೂ ಕಂಡುಬರುವುದಿಲ್ಲ. ಮಾವೋವಾದಿಗಳು ಯಾವುದೇ ರಾಜಕೀಯ ಕಾರ್ಯಸೂಚಿಯನ್ನು ಅನುಸರಿಸುತ್ತಿಲ್ಲ, ಮತ್ತು ಶೋಷಿತ ಜನತೆಯನ್ನು ರಾಜಕೀಯಕ್ಕೆ ಸೆಳೆಯುವುದರಲ್ಲಿ ವಿಫಲವಾಗಿರುವುದು ಈ ಸಂವಾದಗಳಲ್ಲಿ

ವ್ಯಕ್ತವಾಗುತ್ತದೆ. ಆರ್ಘಾದ್‌ರವರು ಜನತೆಯ ಸಂಕಷ್ಟಗಳ ಬಗ್ಗೆ ಚರ್ಚೆಯನ್ನು ಬಯಸುತ್ತಾರೆಯೇ ಹೊರತು, ಈ ಜನತೆ ತಮ್ಮ ಸಂಕಷ್ಟಗಳ ನಿವಾರಣೆಗಾಗಿ ನಡೆಸುತ್ತಿರುವ ಕ್ರಾಂತಿಕಾರಿ ಹೋರಾಟಗಳ ಬಗ್ಗೆ ಚರ್ಚೆ ಬಯಸದಿರುವುದು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ.

ನೇಪಾಳದ ಮಾವೋವಾದಿಗಳು ಭಾರತದ ಸಂಗಾತಿಗಳಿಗಿಂತಲೂ ಒಂದು ಹೆಜ್ಜೆ ಮುಂದಿದ್ದರೆ ಅದು ಈ ನಿಟ್ಟಿನಲ್ಲೇ ಎಂದು ಹೇಳಬಹುದು. ನೇಪಾಳೀ ಮಾವೋವಾದಿಗಳ ರಾಜ ಶಾಹಿ ವಿರೋಧಿ ಘೋಷಣೆಗಳು ರಾಜ ಪ್ರಭುತ್ವದ ನೈಜ ರಾಜಕೀಯ ಬಿಕ್ಕಟ್ಟಿನೊಡನೆ ತಾಳೆಯಾದದ್ದರಿಂದಲೇ ಮಾವೋವಾದಿಗಳು ನೇಪಾಳದಲ್ಲಿ ಉಂಟಾದ ಬೆಳವಣಿಗೆಗಳಲ್ಲಿ ನೇರವಾಗಿ, ಪರಿಣಾಮಕಾರಿಯಾಗಿ ಪ್ರವೇಶಿಸಲು ಸಾಧ್ಯವಾಗಿದೆ. ನೇಪಾಳದ ಪರಿಸ್ಥಿತಿ ಇನ್ನೂ ತಿಳಿಯಾಗಿದ್ದು, ನೇಪಾಳಿ ಮಾವೋವಾದಿಗಳ ತಾತ್ವಿಕ ಪ್ರತಿಪಾದನೆಗಳು ಚರ್ಚಾಸ್ಪದವಾಗಿದ್ದರೂ, ಪ್ರಚಂಡ ಮತ್ತವರ ಸಂಗಾತಿಗಳು ಅಲ್ಲಿನ ಸನ್ನಿವೇಶದಲ್ಲಿ ಅಪ್ರತಿಮವಾದ ರಾಜಕೀಯ ಆಲೋಚನಾ ಶಕ್ತಿಯನ್ನೂ, ಕ್ರಿಯಾಶೀಲತೆಯನ್ನೂ ತೋರಿದ್ದಾರೆಂದರೆ ಅತಿಶಯೋಕ್ತಿಯೇನಲ್ಲ. ಆದರೆ ಇಲ್ಲಿ ಆರ್ಘಾದ್ ಮತ್ತವರ ಸಂಗಾತಿಗಳು ರಾಜಕೀಯ ಜಡತ್ವ ಮತ್ತು ದಿವಾಳಿತನವನ್ನು ಪ್ರದರ್ಶಿಸುತ್ತಾ ಕೆಲವೊಮ್ಮೆ ರಾಜಕೀಯ ಅಧಃಪತನವನ್ನೂ ಪ್ರದರ್ಶಿಸಿರುವುದುಂಟು. ಉದಾಹರಣೆಗೆ 2004ರ ಆಗಸ್ಟ್ 18ರಂದು ಬಿಹಾರದ ಪಾಲಿಗಂಜ್‌ನ ಶಾಸಕರ ಪ್ರೇರೇಪಣೆಯ ಮೇರೆಗೆ ಮಾವೋವಾದಿಗಳು ಸಿ.ಪಿ.ಐ.ಎಂ.ಎಲ್. ನ ಕಛೇರಿಯ ಮೇಲೆ ದಾಳಿ ಮಾಡಿ, ಅಲ್ಲಿ ಮಲಗಿದ್ದ ಐವರು ಪಕ್ಷದ ಕಾರ್ಯಕರ್ತರನ್ನು ಭೀಕರವಾಗಿ ಕೊಲೆ ಮಾಡಿದ್ದು ಈ ರಾಜಕೀಯ ಅಧಃಪತನಕ್ಕೆ ನಿದರ್ಶನವಷ್ಟೇ. ಯಾವಾಗಲೂ ಕೆಲವು ಸಹಾನುಭೂತಿ ಪರ ವೀಕ್ಷಕರು ಚರ್ಚೆ ಎತ್ತಿದ ಕೂಡಲೇ ಅವರನ್ನು ಪರಿಷ್ಕರಣವಾದಿಗಳೆಂದೋ, ಎನ್.ಜಿ.ಓ. ಗಳೆಂದೋ, ಆಧುನಿಕೋತ್ತರ (7) ಚಿಂತಕರೆಂದೋ ಹೀಯಾಳಿಸುವುದು ಮಾವೋವಾದಿಗಳ ಲಕ್ಷಣವಾಗಿಬಿಟ್ಟಿದೆ. ಆದರೆ ತಮ್ಮ AIPRF(8) ನಿಂದ 2004ರ ಮುಂಬೈ ಪ್ರತಿರೋಧದವರೆಗೆ, ಇತ್ತೀಚಿನ PDFI (9) ನವರೆಗೆ, ಮಾವೋವಾದಿಗಳು ಹುಟ್ಟುಹಾಕಿದ ಎಲ್ಲಾ ವೇದಿಕೆಗಳಲ್ಲೂ ಆಧುನಿಕೋತ್ತರ ಚಿಂತಕರು ಮತ್ತು ವಿವಿಧ ರೂಪಗಳ ಎನ್.ಜಿ.ಓ ಗಳೇ ತುಂಬಿರುವುದೂ ಕಟು ವಾಸ್ತವ. ಪ್ರಜಾಂದೋಲನಗಳ ಮತ್ತು ರಾಜಕೀಯ ಕ್ರಿಯಾಶೀಲತೆಯ ದಾರಿದ್ರ್ಯತೆಯನ್ನು ಮುಚ್ಚಿಹಾಕುವ ಸಲುವಾಗಿ ಕೆಲವು ವ್ಯಕ್ತಿಗಳನ್ನು, ಸಂಘಟನೆಗಳನ್ನು ಹೀಯಾಳಿಸುವುದರಿಂದ ಪ್ರಯೋಜನವಾಗುವುದಿಲ್ಲ.

ತಮ್ಮ ನಡುವೆ ನಡೆಯುವ ಎಲ್ಲಾ ರೀತಿಯ ತೀಕ್ಷ್ಣ ವಾಗ್ವಾದಗಳ ಹೊರತಾಗಿಯೂ, ಯಚ್ಚೂರಿ ಮತ್ತು ಆರ್ಘಾದ್‌ರವರು ಒಕ್ಕೊರಲಿನಿಂದ ಮಾವೋವಾದವನ್ನು ನಕ್ಸಲ್

ವಾದದೊಂದಿಗೆ ಸಮೀಕರಿಸಲು ಯತ್ನಿಸುತ್ತಾರೆ. (ಒಂದು ಸಂದರ್ಭದಲ್ಲಿ ಯರ್ಚೂರಿಯವರು ಭಾರತೀ.ಯ ಮಾವೋವಾದಿಗಳನ್ನು ಮಾರ್ಕ್ಸಿಸ್ಟ್ ಮುಖವಾಡ ಧರಿಸಿರುವ ಆಳುವ ವರ್ಗದ ಬಾಡಿಗೆ ಸೈನಿಕರೆಂದು ಜರೆದದ್ದೂ ಉಂಟು) ವಾಸ್ತವವೆಂದರೆ, ನಕ್ಸಲ್ ಬಾರಿ ದಂಗೆ ಹುಟ್ಟುಹಾಕಿದ ಸಿ.ಪಿ.ಐ.ಎಂ.ಎಲ್ ಚಳುವಳಿಯು ಎರಡು ನಿರ್ದಿಷ್ಟ ಮಾರ್ಗಗಳಲ್ಲಿ ಪ್ರಕಟಗೊಂಡಿದೆ. ತನ್ನ ಪ್ರಾರಂಭಿಕ ಕ್ರಾಂತಿಕಾರಿ ಅವಧಿಯಲ್ಲಿ ಅನುಭವಿಸಿದ ಹಿನ್ನಡೆ ಮತ್ತು ಆಳುವ ವರ್ಗಗಳಿಂದ ಸಾವಿರಾರು ಕಾರ್ಯಕರ್ತರ ಕಗ್ಗೊಲೆಯ ಹಿನ್ನೆಲೆಯಲ್ಲಿ, ಬಿಹಾರದಲ್ಲಿ ಸಿ.ಪಿ.ಐ.ಎಂ.ಎಲ್ ಪಕ್ಷದ ಉದಯದೊಂದಿಗೆ, ನಕ್ಸಲ್ ಬಾರಿಗೆ ಹೊಸ ಜೀವ ಬಂದಿತ್ತೆಂದು ಹೇಳಬಹುದು. ಅಂದಿನ ಪರಿಸ್ಥಿತಿಯಲ್ಲಿದ್ದ ಸಂದಿಗ್ಧತೆ ಮತ್ತು ಅನೇಕ ಒಡಕುಗಳ ನಡುವೆಯೂ ಪುನರ್ ಸಂಘಟಿತಗೊಂಡ ಸಿ.ಪಿ.ಐ.ಎಂ.ಎಲ್. ಪಕ್ಷವು, ಸಿ.ಪಿ.ಐ.ಎಂ.ಎಲ್. ಲಿಬರೇಷನ್ ಎಂಬ ಹೆಸರಿನಲ್ಲಿ ಉದಯವಾಗಿತ್ತು. ಇದಕ್ಕೂ ಮುನ್ನ ಪಕ್ಷದ ಕೇಂದ್ರ ಸಂಘಟನೆಯು ದೇಶದ ವಿವಿಧೆಡೆಗಳಲ್ಲಿ ಗ್ರಾಮೀಣ ಬಡಜನತೆಯನ್ನು ಕ್ರಾಂತಿಕಾರಿ ಹೋರಾಟಗಳಲ್ಲಿ ತೊಡಗಿಸಿ, ಕೇವಲ ಮಾರ್ಕ್ಸ್‌ವಾದಿ-ಲೆನಿನ್ ವಾದಿಗಳಿಗೆ ಮಾತ್ರವಲ್ಲದೆ ಅನೇಕ ಸಿ.ಪಿ.ಐ. ಮತ್ತು ಸಿ.ಪಿ.ಎಂ. ಪಕ್ಷದ ಕಾರ್ಯಕರ್ತರಿಗೂ ಸ್ಫೂರ್ತಿಯ ನೆಲೆಯಾಗಿ ಪರಿಣಮಿಸಿತ್ತು. ಬದಲಾಗುತ್ತಿದ್ದ ಸನ್ನಿವೇಶಕ್ಕನುಗುಣವಾಗಿ ಸಿ.ಪಿ.ಐ.ಎಂ.ಎಲ್. ಪಕ್ಷವು ತನ್ನ ತಂತ್ರಗಾರಿಕೆಯನ್ನು ಹೊಂದಿಸಿಕೊಂಡರೂ, ತನ್ನ ಕೇಂದ್ರಬಿಂದುವಾದ ಕ್ರಾಂತಿಕಾರಿ ನಿಲುವನ್ನು ಸಡಿಲಗೊಳಿಸಲಿಲ್ಲ. ಆದರೆ ಇನ್ನೊಂದೆಡೆ ಮಾವೋವಾದಿಗಳು ತಮ್ಮ ಇಡೀ ಚಳುವಳಿಯನ್ನು ಅರಾಜಕತಾ ಮಿಲಿಟರಿವಾದದಲ್ಲಿ ಮುಳುಗಿಸಿಬಿಟ್ಟಿರುವುದು ಸ್ಪಷ್ಟವಾಗಿದೆ. ಸಿ.ಪಿ.ಐ.ಎಂ.ಎಲ್.ನ ಐತಿಹಾಸಿಕ ಮಾರ್ಗದಿಂದ ವಿಮುಖರಾದ ಮಾವೋವಾದಿಗಳು ಈಗ ತಮ್ಮ ಪಕ್ಷದ ಹೆಸರನ್ನು ಸಿ.ಪಿ.ಐ. (ಮಾವೋವಾದಿ) ಎಂದು ಬದಲಿಸುವ ಮೂಲಕ ತಮ್ಮ ಹಳೆಯ ತಪ್ಪನ್ನೇ ಮತ್ತೆ ಮಾಡಲು ಹೊರಟಿದ್ದಾರೆ.

ಯರ್ಚೂರಿಯವರ ಮೂರು ಪ್ರವೃತ್ತಿಯ ಬಗ್ಗೆ ಹೇಳುವುದಾದರೆ, ಭಾರತೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ, ಮೂರು ಐತಿಹಾಸಿಕ ಮಾರ್ಗಗಳಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಆದರೆ ಅವರು ತಮ್ಮ ವರ್ಗೀಕರಣವನ್ನು ಸ್ವಲ್ಪ ಬದಲಾಯಿಸಬೇಕಾಗಿದೆಯಷ್ಟೆ. ಸಿ.ಪಿ.ಐ. ಮತ್ತು ಸಿ.ಪಿ.ಎಂ. ಪಕ್ಷಗಳು ಪ್ರಸ್ತುತ ಸನ್ನಿವೇಶದಲ್ಲಿ ಒಂದೇ ನೆಲೆಯಲ್ಲಿ ನಿಲ್ಲುತ್ತವೆ. ಆ ನೆಲೆಯನ್ನು ಪರಿಷ್ಕರಣವಾದ ವೆಂದಾಗಲೀ, ಅವಕಾಶವಾದವೆಂದಾಗಲೀ ಅಥವಾ ಸುಧಾರಣಾವಾದವೆಂದಾಗಲೀ ಅರ್ಥೈಸಬಹುದು. ಈ ಮಾರ್ಗದ ಈಗಿನ ಮುಖ್ಯ ಧಾರೆ ಎಂದರೆ, ಭಾರತದ ಆಳುವ ವರ್ಗಗಳ ಎಡ ಪಂಥೀಯ ಮುಖವೆಂದು ಹೇಳಬಹುದು. ಇಲ್ಲಿ ಟೋನಿ ಬ್ಲೇರ್‌ರವರ ಲೇಬರ್ ಪಕ್ಷ ಮತ್ತು ಲೂಲಾನ (10) ಕಾರ್ಮಿಕರ ಪಕ್ಷದ ಸಮ್ಮಿಳನದ ಛಾಯೆಯನ

ಕಾಣಬಹುದು. ಇನ್ನೊಂದೆಡೆ ಮಾವೋವಾದಿಗಳು ತಮಗಾಗಿ ಪೂರ್ಣ ಪ್ರಮಾಣದ ಅರಾಜಕತೆಯ ಧಾರೆಯನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ. ಈ ಎರಡೂ ಮಾರ್ಗಗಳು ಸಂಪೂರ್ಣ ತದ್ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿದ್ದರೂ, ಒಂದು ಕಡೆ ಎರಡು ಮಾರ್ಗಗಳು ತಮ್ಮ ಸಂಧಿಕಾಲವನ್ನು ಗುರುತಿಸಿಕೊಳ್ಳುತ್ತವೆ. ಎರಡೂ ಮಾರ್ಗಗಳು ದುಡಿಯುವ ವರ್ಗಗಳನ್ನು ಬೂರ್ಷ್ವಾ ರಾಜಕೀಯದ ಅಡಿಯಾಳಾಗಿ ಪರಿಗಣಿಸುತ್ತವೆ. ಈ ಎರಡು ದಿಕ್ಕು ತಪ್ಪಿದ ಮಾರ್ಗಗಳ ವಿರುದ್ಧ ನಿರಂತರವಾಗಿ ಹೋರಾಡುತ್ತಾ, ಸಿ.ಪಿ.ಐ.ಎಂ.ಎಲ್ ಲಿಬರೇಷನ್ ಪಕ್ಷವು, ಎಲ್ಲಾ ರೀತಿಯ ಅಡ್ಡಿ ಆತಂಕಗಳ ನಡುವೆಯೂ ಭಾರತೀಯ ಕಮ್ಯುನಿಸ್ಟ್ ಚಳುವಳಿಯ ಕ್ರಾಂತಿಕಾರಿ ಮಾರ್ಗವನ್ನು ಬೆಳೆಸುವುದಲ್ಲದೇ ಅಲ್ಲದೆ, ಸಮರ್ಥಿಸಿಕೊಂಡು ಮುನ್ನಡೆಯುತ್ತಿದೆ.

**ಟಿಪ್ಪಣಿ :**

೧. ಸೀತಾರಾಮ್ ಯಚೂರಿ ಸಿ.ಪಿ.ಎಂ. ಪಕ್ಷದ ಮುಖಂಡರು

೨. Revisionist : ಪರಿಷ್ಕರಣವಾದ ಮಾರ್ಕ್ಸ್‌ವಾದದ ಮೂಲ ತತ್ವವನ್ನು ಪರಿಷ್ಕರಿಸುವುದು

೩. ಕೇಂದ್ರದ ಯು.ಪಿ.ಎ. ಸರ್ಕಾರದಲ್ಲಿ ಈ ಎರಡೂ ಪಕ್ಷಗಳು ಕೂಡಿದ್ದರೂ, ಬಿಹಾರದ ಮಟ್ಟದಲ್ಲಿ ಇವರು ವಿರೋಧಿಗಳು.

೪. ಸಿ.ಪಿ.ಎಂ. ಪಕ್ಷವು ಈ ಹಿಂದೆ ಎರಡನೇ ಕಮ್ಯುನಿಸ್ಟ್ ಅಂತರಾಷ್ಟ್ರೀಯ ಗ್ರಹಿಸಿದ್ದ ಅರ್ಥದಲ್ಲಿಯೇ ದಲ್ಲಾಳಿ (Comprador) ಬಂಡವಾಳಿಗರ ಅರ್ಥ ಬಳಸುತ್ತಿದ್ದಾರೆ. ಆದರೆ ಕಳೆದ ನೂರು ವರ್ಷಗಳಲ್ಲಿ ಈ ಪದ ಬಹಳ ಬದಲಾವಣೆ ಕಂಡಿದೆ.

೫. ಬನಾನಾ ರಿಪಬ್ಲಿಕ್ : ದಕ್ಷಿಣ ಅಮೇರಿಕಾದ ಯು.ಎಸ್. ಎಂಬ ಬಾಲಂಗೋಚಿ ದೇಶಗಳು

೬. ಪ್ರಚಂಡ : ನೇಪಾಳ ಮಾವೋವಾದಿ ಪಕ್ಷದ (ಸಿ.ಪಿ.ಎನ್ (ಎಂ)) ರ ಅಧ್ಯಕ್ಷರು

೭. Post modernist : ಆಧುನಿಕೋತ್ತರ ಚಿಂತನಾ ಕ್ರಮ. ಇವರ ಪ್ರಕಾರ ಇಂದಿನ ಜಗತ್ತನ್ನು ಅರ್ಥ ಮಾಡಿಕೊಳ್ಳಲು ಆಧುನಿಕ ಚಿಂತನೆಗಳು, ಉದಾ. ಮಾರ್ಕ್ಸ್‌ವಾದ, ಉದಾರವಾದ ಇವೆಲ್ಲಾ ಅಪ್ರಸ್ತುತ.

೮. AIPRF : All India Peoples Resistance Forum

೯. PDFI : Peoples Democratic forum of India

೧೦. ಬ್ಲೇರ್ ಮತ್ತು ಲೂಲ, ಬ್ರಿಟನ್‌ನ ರಾಜಕೀಯ ಪಕ್ಷಗಳು